ಅಪರಂಜಿ

ಡಿಸೆಂಬರ್ 96

ತಿಳಿನಗೆಯ ಕಾರಂಜಿ



* ಪ್ರಕಾಶ್
* ನಾ. ಕಸ್ತೂರಿ
* ಶಿವು
* ಎಂ. ಎಸ್. ಕೆ. ಪ್ರಭು
* ಅ. ರಾ. ಮಿತ್ರ
* ಕೇಫ
* ಎಚ್. ಗೋಪಾಲಕೃಷ್ಣ
* ಎಂ ಎನ್. ಕೆ.
* ಚಂಚಲಾ ಸುರತ್ಕಲ್
* ಹಾ. ರಾ.
* ಅರುಣಾ ಕಾರಂತ

ಬಿಡಿ ಪ್ರತಿ : 3 ರೂ. 50 ಪೈ



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 14 **ಡಿಸೆಂಬರ್ 96** **ಸಂಚಿಕೆ-3**

ಕತಮ ಆತ್ಮಾ

-ಉಪನಿಷತ್

ನಮ್ಮ ಆತ್ಮನಾರು ಎಂದು ನಾಲ್ವರು ಮಹಾಗೃಹಸ್ಥರು ಜಿಜ್ಞಾಸೆ ಮಾಡಿದ ವಿಷಯ ಉಪನಿಷತ್ತಿನಲ್ಲಿ ಬರುತ್ತದೆ.

ಅಂದರೆ ನಾನು ಯಾರು ಎಂಬ ಚಿಂತನೆ (ಚಿಂತೆ?) ಬಹು ಹಿಂದಿನಿಂದಲೂ ಇತ್ತು. ಈಗ ಇರುವುದೇನೂ ಹೆಚ್ಚಲ್ಲ.

ನಾವು ವಿಶ್ವದ ಅತ್ಯಂತ ದೊಡ್ಡ (ದಡ್ಡ?) ಪ್ರಜಾಪ್ರಭುತ್ವದ ಪ್ರಭುಗಳು. ನಮ್ಮ ಆಳರಸರು (ಹಾಳರಸರು?) ನಮ್ಮ ಪ್ರತಿನಿಧಿಗಳು ಅವರ ಚಿಂತೆಯೆಲ್ಲಾ ದೀನ ದಲಿತರ ಅಲ್ಪಸಂಖ್ಯಾತರ ಉದ್ಧಾರದತ್ತಲೇ ಇದೆ. ಹಾಗಾದರೆ ಉಳಿದವರ ಬಗೆಗೆ ಅವರ ಜವಾಬುದಾರಿ ಏನೂ ಇಲ್ಲವೆಂದೇ?


ಸಾವಿರಾರು (ಎಂದರೆ ಲಕ್ಷಾಂತರ ಕೋಟಿ ಕೋಟಿ?) ಕೋಟಿ ಭ್ರಷ್ಟಾಚಾರದ ಸುದ್ದಿ ದಿನ ಬೆಳಗಾಗಬರುತ್ತಿದೆ. ಯೋಜನೆಗಳ, ಕಾರ್ಯಕ್ರಮಗಳ ಸರಮಾಲೆ ಕತ್ತಿನ ಸುತ್ತಾ ಸುತ್ತುತ್ತಿದೆ.

ಯಾವುದು ನಿಜ ಯಾವುದು ಸುಳ್ಳು?

ಭ್ರಷ್ಟಾಚಾರಿಗಳು ಭ್ರಷ್ಟಾಚಾರಕ್ಕಾಗಿ ಭ್ರಷ್ಟಾಚಾರದಿಂದ ನಡೆಯುವವರನ್ನು ನಾವು ಆರಿಸಿರುವವರೇ?

ನಾವು ಭಾರತೀಯರು! ತುತ್ತು ಅನ್ನಕ್ಕಾಗಿ, ಗೇಣು ಬಟ್ಟೆಗಾಗಿ, ಸತ್ಯಕ್ಕಾಗಿ ಕಾತರರಾಗಿರುವವರಲ್ಲವೇ? ಹಾಗಾದರೆ ಹೀಗೇಕೆ?

ನಾವು ಯಾರು?





ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ: ರೂ. 3.50
ವಾರ್ಷಿಕ ಚಂದಾ: ರೂ. 35
ಆಜೀವ ಚಂದಾ : ರೂ. 350

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 14 ಡಿಸೆಂಬರ್ 96 ಸಂಚಿಕೆ-3

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಂ ಪ್ರಕಾಶ್

''ಅಂಚೆ ನೌಕರರ ಮುಷ್ಕರ''

''ವರಮಾನ ತೆರಿಗೆ ನೌಕರರ ಅನಿರ್ದಿಷ್ಟ ಮುಷ್ಕರ''

(ಅಕ್ಕ ಪಕ್ಕದ ಸುದ್ದಿಗಳು)

ಸುಖ, ದುಃಖ ಅಂದರೆ ಇದೇ!!

★★★

ವಿಶ್ವಸುಂದರಿ ಪ್ರತಿಭಟನಾ ಸಂಘಗಳದ್ದೇ ಒಂದು ಭಾರಿ ಸ್ಪರ್ಧೆ ಮಾಡುತ್ತಾರೆ ಎಂಬುದು ಶುದ್ಧ ಕುಹಕ!!

★★★

ಕೇಸರಿಗೂ ಮಣ್ಣಿಗೂ ನಡುವೆ

ಘರ್ಷಣೆ ಶುರುವಾಗುವಂತಿದೆ!!

★★★

ಆಫ್ರಿಕಾ ಅಭಿವೃದ್ಧಿಗೆ ಭಾರತ ಕಾಣಿಕೆ -ಪತ್ರಿಕೆ

ಹೊಟ್ಟೆಗೆ ಹಿಟ್ಟಿಲ್ಲ......!

★★★

ಕೊಂಕಣ ರೈಲು ಮಾರ್ಗ ಎರಡು ತಿಂಗಳಲ್ಲಿ ಸಿದ್ಧ

-ಸುದ್ದಿ

ಮೈಲಾರಕ್ಕೆ ಹೋಗದಿದ್ದರೆ ಸಾಕು!!

★★★

ಉತ್ತರ ಪತ್ರಿಕೆಯೊಂದಿಗೆ ನಕಲಿ ವಿದ್ಯಾರ್ಥಿ ಪರಾರಿ - ಸುದ್ದಿ

ವಿದ್ಯಾಭ್ಯಾಸದ ಮುನ್ನಡೆ !!

★★★

ವಿಶ್ವಸುಂದರಿ ಸ್ಪರ್ಧೆ; ಎ.ಬಿ.ಸಿ.ಎಲ್ ವಶಕ್ಕೆ ಕೆ.ಎಸ್.ಸಿ.ಎ. ಕ್ರೀಡಾಂಗಣ

- ಪತ್ರಿಕೆ

"This is not Cricket'

ಅಂತ ಕೆಲವರು ಗೊಣಗಿದರಂತೆ!!

★★★

ಕಾಂಗ್ರೆಸ್ ಪಕ್ಷವನ್ನು ಮತ್ತೆ ಕಟ್ಟುವ ಕೆಲಸಕ್ಕೆ ಆದ್ಯತೆ

- ಪತ್ರಿಕೆ

ಬಹಳಷ್ಟು ಸಿಮೆಂಟ್ ಬೇಕಾಗಬಹುದು!

★★★



"CET ಕೌನ್ಸೆಲಿಂಗೇ ಬೇಡಾಪ್ಪ, ಹೀಗೇ ಚೆನ್ನಾಗಿದೆ ಅಂತಾನಲ್ಲಾರೀ ನಮ್ಮ ಹುಡುಗ!"

ನಮ್ಮ ನಿಮ್ಮಲ್ಲಿ

ನಾ. ಕಸ್ತೂರಿಯವರು ನಮ್ಮ ಮನೆಗೆ ಬರುತ್ತಿದ್ದ ದಿನಗಳಲ್ಲಿ ನಾವೆಲ್ಲಾ ಇನ್ನೂ ಚಿಕ್ಕವರು. ಅವರು ಬರುತ್ತಿದ್ದುದು ಸಾಮಾನ್ಯವಾಗಿ ಮಧ್ಯಾಹ್ನ ಒಂದು ಘಂಟೆಗೆ. ತಂದೆಯವರ ಕ್ಲಿನಿಕ್ಕಿಗೆ ಬಂದು ಅವರೊಡನೆ ಮನಗೆ ಬರುವ ಹೊತ್ತಿಗೆ ನಮ್ಮ ತಾಯಿ ಊಟದ ಮನೆಯಲ್ಲಿ ಮಣೆಹಾಕಿ, ಎಲೆ ಸಿದ್ಧಮಾಡಿರುತ್ತಿದ್ದರು. ಮಾತನಾಡುತ್ತಾ ಊಟಮಾಡುತ್ತಿದ್ದಾಗ, ನಮಗೆ ಕೇಳಿಸುತ್ತಿದ್ದ ಅವರ ಕೀಚಲು ಕಂಠ ಇನ್ನೂ ಕಿವಿಯಲ್ಲಿ ಗುಣಗುಣಿಸುತ್ತಿದೆ. ಕೊರವಂಜಿಯಲ್ಲಿ ಅನೇಕ ಕಾವ್ಯನಾಮಗಳನ್ನು ಬಳಸಿ, ಅವರು ಬರೆಯುತ್ತಿದ್ದ ಲೇಖನಗಳು ನಿಜಕ್ಕೂ ಉತ್ತಮ ಹಾಸ್ಯಕ್ಕೆ ಹೆಸರಾಗಿದ್ದವು. ಹೀಗಾಗಿ ಹಲವು ತಿಂಗಳುಗಳ ಹಿಂದೆ ಹಾಸ್ಯ ಬ್ರಹ್ಮದ ಗೋಪಾಲ್ ಮತ್ತು ಕೃಷ್ಣ, ಕಸ್ತೂರಿಯವರ ಜನ್ಮ ಶತಾಬ್ಧಿಯನ್ನು ಆಚರಿಸುವುದರ ಬಗ್ಗೆ ಪ್ರಸ್ತಾಪಿಸಿದಾಗ, ನಾನು ಆ ಹಿರಿಯರ ಸಾಹಿತ್ಯ ಋಣ ತೀರಿಸಲು ಇದೊಂದು ಸದವಕಾಶ ಎಂದು ತಿಳಿದು ಸಂತಸದಿಂದ ಒಪ್ಪಿಕೊಂಡೆ. ಕಾರ್ಯಕ್ರಮದ ವಿವರಗಳನ್ನು ಇದೇ ಸಂಚಿಕೆಯಲ್ಲಿ ಬೇರೊಂದೆಡೆ ನೀಡಿದ್ದೇವೆ. ಹಿಂದೆ ಅಪರಂಜಿ ಹಮ್ಮಿಕೊಂಡ ಇತರ ಕಾರ್ಯಕ್ರಮಗಳಂತೆ ಇದನ್ನೂ ಅತ್ಯಂತ ಮನೋರಂಜಕವಾಗಿ ನಡೆಸಲು ಎಲ್ಲ ಯತ್ನಗಳನ್ನೂ ಮಾಡಿದ್ದೇವೆ. ಎಲ್ಲರೂ ಖಂಡಿತ ಬನ್ನಿ. ಇದೇ ಸಂದರ್ಭದಲ್ಲಿ ಕೊರವಂಜಿಗೆ ಕಸ್ತೂರಿಯವರು ಬರೆದ ಹಲವು ಲೇಖನಗಳನ್ನು ಒಂದು ಪುಸ್ತಕದ ರೂಪದಲ್ಲಿ ಹೊರತಂದರೆ ಚೆನ್ನಾಗಿರುತ್ತದೆ ಎನ್ನಿಸಿತು. ಅಪರಂಜಿ ಪ್ರಕಾಶನದಿಂದ ಗೋಪಾಲ್ ಹಾಗೂ ಕೃಷ್ಣ ಅವರ ಸಂಪಾದಕತ್ವದಲ್ಲಿ ''ಕೊರವಂಜಿ-ಕಸ್ತೂರಿ' ಶತಾಬ್ಧಿಯ ದಿನ ಬಿಡುಗಡೆಯಾಗಲಿದೆ.

ಹಲವು ದಿನಗಳ ಹಿಂದೆ ಮಂಡ್ಯದಿಂದ ಶ್ರೀಯುತ ಹೆಚ್.ಎಲ್. ಕೇಶವಮೂರ್ತಿಯವರು ಬಂದಿದ್ದರು. ಅವರೂ ಸಹ, ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಕಸ್ತೂರಿಯವರ ಎಲ್ಲ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರುವ ಯತ್ನದಲ್ಲಿದ್ದಾರೆ. ನನ್ನಲ್ಲಿದ್ದ ಲೇಖನಗಳೆಲ್ಲವನ್ನೂ ಅವರಿಗೆ ಕೊಟ್ಟೆ. ಮಾರನೆಯ ದಿನ ಪುಣೆಯಿಂದ 'ಮನು' ಬಂದಿದ್ದರು. ಅವರು ವಾಹನಗಳ ರೋಡ್‌ವರ್ದಿನೆಸ್ ಅನ್ನು ಪ್ರಮಾಣಿಸುವ ಇಲಾಖೆಯಲ್ಲಿದ್ದಾರೆ. ಈಗ ಹೊಸದಾಗಿ ನಮ್ಮ ದೇಶದವರೇ ಒಬ್ಬರು ತಯಾರಿಸಿರುವ ವಿದ್ಯುತ್‌ಕಾರಿನ ಬಗ್ಗೆ ತುಂಬಾ ಹೇಳಿದರು. ದಿನ ಬೆಳಗಾದರೆ ಗೋಳಿನ ಸುದ್ದಿಗಳನ್ನೇ ಓದಬೇಕಾದ ಈ ದಿನಗಳಲ್ಲಿ, ಈ ತರಹದ ಹಲವಾದರೂ Success Storiesಗಳನ್ನು ಅಚ್ಚಿಸಿದರೆ ಎಷ್ಟು ಚೆನ್ನ ಅನ್ನಿಸಿತು.

ಅದೇ ಸಂಜೆ ಆನಂದ್‌ನಿಂದ ಶ್ರೀರಾಮ್ ದಂಪತಿಗಳು ಮನೆಗೆ ಬಂದರು. ಜೊತೆಯಲ್ಲಿ ಅವರ ಮಗು. ಆ ಮುದ್ದು ಕಂದನನ್ನು ''ಏನು ಹೆಸರು?'' ಎಂದು

ಲೋಕಾಭಿರಾಮವಾಗಿ ಕೇಳಿದೆ. ಶ್ರೀರಾಮ್ ಬಾಯಿಹಾಕಿ ""I have not given him a name. I have given him a sentence for life" ಅಂತ ನಗುತ್ತಾ ಹೇಳಿದರು. ಮಗುವಿನ ಹೆಸರು 'ಅರ್ಜುನ್ ಶತ್ರುಂಜಯ'! ಶ್ರೀರಾಮ್ ತಮ್ಮ ಹೊಸ ಪುಸ್ತಕ 'ಅವರವರ ಸತ್ಯ' ವನ್ನು ಅಂದು ಕೊಟ್ಟರು. ಈ ಪುಸ್ತಕದ ಬಗ್ಗೆ ಮುಂದೊಮ್ಮೆ ಬರೆಯುವೆ.

ಯುಗಾದಿ'97ರ ಸಂಚಿಕೆಯ ತಯಾರಿ ನಡೆದಿದೆ. ಎಲ್ಲ ಲೇಖಕರಿಗೂ ಇದೋ ಮುಕ್ತ ಆಹ್ವಾನ. ಲೇಖನಗಳು ಜನವರಿ ಹದಿನೈದರ ಹೊತ್ತಿಗೆ ನಮಗೆ ಸೇರುವಂತಾಗಲಿ.

ಹಲವು ದಿನಗಳ ಹಿಂದೆ ಸಂಡೇ ಟೈಂಮ್ಸ್‌ನಲ್ಲಿ ಅಶೋಕ್ ಮಲಿಕ್ ಎಂಬಾತ ಒಂದು ಕುತೂಹಲ ಜನಕ ಲೇಖನ ಬರೆದಿದ್ದ. India-A Dangerous place to be ಎಂಬ ಶೀರ್ಷಿಕೆಯ ಆ ಲೇಖನದ ಶೈಲಿಯೇ ಸೊಗಸು.

''ಜಗತ್ತಿನ ರಾಷ್ಟ್ರಗಳೆಲ್ಲಾ ಒಂದು ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸುವಂತಾದರೆ ಇಂಡಿಯಾವನ್ನು ಖಂಡಿತವಾಗಿ 'ಅಪಘಾತಗಳ ಅಪ್ಸರೆ' (Calamity jane) ಎಂದು ಹೆಸರಿಸಬಹುದು ಎಂದು ಪ್ರಾರಂಭಿಸಿ, ಲೇಖನದ ಕೊನೆಗೆ "India has First world aspirations, Third world resourses and a nether world sence of priorities. Calamity Could'nt have found a better friend" ಎಂದು ಹೇಳುತ್ತಾನೆ.

ಅಪರಂಜಿಯ ಬಗ್ಗೆ ಓದುಗರ ಅಭಿಪ್ರಾಯಗಳಿಗೆ ಸದಾ ಸ್ವಾಗತ ನಿಮ್ಮ ಅನಿಸಿಕೆಗಳನ್ನು ಖಂಡಿತ ಬರೆದು ಕಳಿಸಿ.

- ಶಿವಕುಮಾರ್



ಛತ್ರಿ ನೋಡ್ರೆ, ಬ್ಯೂಟಿ ಪೇಜಂಟ್‌ಗೆ ಹೋಗ್ಬಂದಿರೋ ಹಾಗಿದೆ!

ನಾನು ಸತ್ತದ್ದು

ನಾ. ಕಸ್ತೂರಿ

ಕೇಳಿದರೆ ಆಶ್ಚರ್ಯವಾಗುತ್ತದೆ. ಅನೇಕರು ನಂಬುವುದೇ ಇಲ್ಲ. ಬಿಡ್ರಿ, ಬಿಡ್ರಿ, ಅಂದುಬಿಡುತ್ತಾರೆ. ಎಲ್ಲಾದರೂ ಉಂಟೆ, ಅಂತ ಮೂಗೆಳೆಯುತ್ತಾರೆ. ಆದರೂ, ನಿಜ ಇವತ್ತಿಗೂ ನಡೆಯುತ್ತಾ ಇದೆ. ನಾಳೇನೂ ನಡೆಯುತ್ತದೆ.

ಏನು ಅಂತೀರೋ? ಪೇಪರುಗಳಲ್ಲಿ ಯಾವುದಾದರೂ ಒಂದು ಔಷಧಿ ಜಾಹಿರಾತು ಓದಿದೆ ಅನ್ನಿ, ನಾನು, ಕೂಡಲೇ ಆ ಜಾಹಿರಾತಿನಲ್ಲಿ ಹೇಳಿರುವ ಖಾಯಿಲೆಗಳೆಲ್ಲವೂ ನನಗೆ ಬಂದಿರುವ ಹಾಗೆ ನನಗೆ ಭಾಸವಾಗುತ್ತದೆ. ಆತ ಆ ಜಾಹಿರಾತಿನಲ್ಲಿ ನಮೂದಿಸಿರುವ ಪಾಪಿ ಪ್ರಾಣಿ ನಾನೇ ಅಂತ ನನಗೆ ಅನ್ನಿಸಿಬಿಡುತ್ತದೆ. ಆತ ಕೊಟ್ಟಿರುವ ವಿವರಣೆಗಳೆಲ್ಲ ನನ್ನ ಅನಾರೋಗ್ಯದ ವಿವರಣೆ ಅಂತ ನನಗೆ ತೋರಿಬಿಡುತ್ತದೆ. ಮೂಲ, ಗಸೆ, ಕ್ಷಯ, ಕೆಮ್ಮು, ಆಮಶಂಕೆ, ಬಿಳುಪು, ಲಕ್ವ, ಅಜೀರ್ಣ, ರಕ್ತ ಯಕೃತ್, ಹುಳುಕಡ್ಡಿ, ತೊಡೆಬಾಳೆ ಮುಂತಾದ ಗುಪ್ತ ಹಾಗೂ ಬಹಿರಂಗ ವ್ಯಾಧಿಗಳೆಲ್ಲ ನನ್ನಲ್ಲಿದ್ದ ಹಾಗೆ ಸಂಕಲ್ಪಮಾಡಿಕೊಂಡು ನೂರಾರು ರೂಪಾಯಿ ತೆತ್ತು ಗುಳಿಗೆಗಳನ್ನು ನುಂಗಿದ್ದೇನೆ; ಮುಲಾಮುಗಳನ್ನು ಹಚ್ಚಿಕೊಂಡಿದ್ದೇನೆ; ತೈಲ, ಆಸವ ಚೂರ್ಣ, ಘೃತಗಳನ್ನು ಸೇವಿಸಿದ್ದೇನೆ; ಓಜನ್ನುಗಳನ್ನೂ, ಆಯಿಲ್‌ಗಳನ್ನೂ, ಆಮಾಲ್ಟ್‌ಗಳನ್ನೂ, ಗಂಟಲೊಳಕ್ಕೆ ಇಳಿಬಿಟ್ಟಿದ್ದೇನೆ.

ಪೇಪರುಗಳಲ್ಲಿ ಬರುವ ಜಾಹಿರಾತುಗಳು ಹಾಗಿರಲಿ ಪುಸ್ತಕಗಳನ್ನು ಬಿಚ್ಚಿದರೂ ಕೂಡ ನಾನು ಈಚೆಗೆ ಬೆಚ್ಚಿಬೀಳುತ್ತಿದ್ದೇನೆ. ಯಾವುದಾದರೂ ಕಾದಂಬರಿಯಲ್ಲಿ ಕಥಾನಾಯಕನಿಗೆ ಕಾಲು ಉಳಿಕಿದ್ದನ್ನು ಗ್ರಂಥಕರ್ತ ವಿವರಿಸಿದ್ದರೆ ಅದನ್ನು ಓದುವಾಗ ನನಗೂ ಯಾಕೋ ಕಾಲು ನೀಡುವುದಕ್ಕಸಾಧ್ಯವಾಗುತ್ತದೆ. ನಾಯಕನ ಮನದನ್ನೆಗೆ ಮಹೋದರ ಬಂದರೆ, ನನ್ನ ಹೊಟ್ಟೆಯೂ ಕೊಂಚ ತಕರಾರು ಮಾಡುತ್ತದೆ.

ಕೆಲ ದಿನಗಳ ಹಿಂದೆ ನಾನು ಪಬ್ಲಿಕ್ ಲೈಬ್ರರಿಗೆ ಹೋಗಿದ್ದೆ. ಹಾಳು ನನ್ನ ಕಣ್ಣು ಒಂದುವೈದ್ಯ ಗ್ರಂಥದ ಮೇಲೆ ಹೋಗಿ ಬಡಿಯಬೇಕೆ? ಅದನ್ನ ಎದುರಿಗಿರಿಸಿಕೊಂಡು ಶೀತ ಜ್ವರದ ವಿಷಯವನ್ನೇ ನಾನು ಓದಬೇಕೆ? ಓದುತ್ತಾ ಓದುತ್ತಾ, ಆ ಜ್ವರದ ಆವಿರ್ಭಾವದ ಸೂಚನೆಗಳೆಲ್ಲವೂ ನನ್ನಲ್ಲೇ ಇದ್ದಂತೆ ನನಗೆ ತೋರಿತು. ತಲೆ ನೇವು, ಗಂಟಲು ಕೆರೆತ, ಮೈ ಕೈ ನೋವು, ಆಹಾರದಲ್ಲಿ ಅಸಡ್ಡೆ, ಕೆಳ ಹೊಟ್ಟೆಯಲ್ಲಿ ಕಿರುಕುಳ, ಮುಂತಾದ ಪೂರ್ವ ಸುಚನೆಗಳೆಲ್ಲವೂ ನನ್ನ ದೇಹದಲ್ಲೂ ಇದ್ದುವು ಹೆದರಿಕೆಯಿಂದ ನಾನು ಬೆವರಿದೆ, ಮುಖದಲ್ಲಿ ಬಿಳುಪೇರಿತು. ಶೀತ ಜ್ವರಕ್ಕೆ ಮಾಡಬೇಕಾದ ಔಷಧೋಪಚಾರಗಳನ್ನೂ ಕೂಡ ಓದಿ ತಿಳಿದುಕೊಳ್ಳಲು ತಾಳ್ಮೆ ಇರಲಿಲ್ಲ. ತಲೆ

ತಿರುಗಿತು; ಬಾಯೊಣಗಿತು; ಗಂಟಲು ಕೆರೆಯಿತು. ಮೊಳಕಾಲು ಮೊಳಕೈಗಳಲ್ಲಿ ವಿಪರೀತ ನೋವು ಕಾಣಿಸಿತು.

ಬಿರುಬಿರನೆ ಪುಸ್ತಕದ ಪುಟಗಳನ್ನು ಮಗುಚಿದೆ. ಖಾಯಿಲೆಗಳೂ ಜ್ವರಗಳು ಒಂದೊಂದಾಗಿ ನನ್ನ ಕಣ್ಣಮುಂದೆ ಹರಿದು ಹೋಯಿತು. ಡೆಂಗ್ಯೂ ಎಂಬ ಜ್ವರದ ಲಕ್ಷಣಗಳೂ ನನ್ನಲ್ಲಿದ್ದುವೆಂದು ತಿಳಿದುಕೊಂಡೆ. ಇನ್ನೊಂದೆರಡು ವಾರಗಳಲ್ಲಿ ನನ್ನ ಸ್ಥಿತಿ ವಿಷಮಿಸಬಹುದೆಂದು ಅದರಲ್ಲಿ ಬರೆದಿತ್ತು. ಹರ್ನಿಯಾವಿಗೆ ತೀರ ಹತ್ತಿರ ಹತ್ತಿರವೆಂದೂ, ಕಾಲರಾದಲ್ಲಿ ಕಾಣಿಸುವ ವಾಂತಿಯ ಪ್ರಥಮ ಚಿಹ್ನೆಯಾದ ವಾಕರಿಗೆ ನನಗೆ ಆಗಾಗ ಬರುವುದುಂಟೆಂದೂ, ಡಿಫ್ತಿರಿಯಾ ಎಂಬ ಹಾಳು ಖಾಯಿಲೆ ಸದಾ ನನ್ನ ಬೆನ್ನು ಹತ್ತಿಕೊಂಡೇ ಬಂದಿದೆ ಎಂದೂ ಭಾಸವಾಯಿತು. ಡಿಫ್ತಿರಿಯಾದಲ್ಲಿ ಇದ್ದೇ ಇರಬೇಕಾದ ಕಿರುನಾಲಿಗೆಯ ಬಿಳುಪು ನನಗೂ ಕೊಂಚ ಇತ್ತೆಂದು ಕನ್ನಡಿ ಮುಂದೆ ಬಾಯಿ ತೆರೆದಾಗ ನನಗೆ ಸ್ಪಷ್ಟವಾಯಿತು. ಅಯ್ಯೋ ಎಂದು ನಾನು ಕನ್ನಡಿ ಮುಂದೆ ಗೋಳಿಟ್ಟೆ. ಆಗ, ಆ ಬಿಳುಪು ಇನ್ನೂ ಸ್ಪಷ್ಟವಾಗಿ ಕಾಣಿಸಿತು. ಹಾಗೆಯೇ ಇಡೀ ಪುಸ್ತಕವನ್ನು ಓದಿ ಮುಗಿಸುವುದರೊಳಗೆ ಮಾನವ ಪ್ರಾಣಿಯಲ್ಲಿ ಪುರುಷವರ್ಗಕ್ಕೆ ಬರಬಹುದಾದ ಎಲ್ಲಾ ಖಾಯಿಲೆಗಳೂ ನನ್ನಲ್ಲಿ ಪ್ರಬಲವಾಗಿಯೋ ಅಬಲವಾಗಿಯೋ ಬೇರೂರಿಯೋ ಚಿಗುರಿಯೋ ನೆಲೆಯಾಗಿ ನಿಂತುಬಿಟ್ಟಿವೆ ಎಂದು ನಿರ್ಧಾರವಾಯಿತು. ಸ್ತ್ರೀ ಸಹಜವಾದ ಕೆಲವು ಖಾಯಿಲೆಗಳ ಹೆಸರುಗಳನ್ನೋದಿದಾಗ, ಅವು ಕೂಡ ನನ್ನಲ್ಲಿದ್ದಿದ್ದರೆ ನನ್ನ ವ್ಯಕ್ತಿತ್ವವೂ ಮಹತ್ವಾಕಾಂಕ್ಷೆಯೂ (ಈ ಮಾತುಗಳು ಸಮಂಜಸವಲ್ಲದಿದ್ದರೆ ವಾಚಕರು ಬೇರೆ ಪದಗಳನ್ನು ಸೇರಿಸಿ ಓದಿಕೊಳ್ಳಬಹುದು) ಪರಿಪೂರ್ಣವಾಗುತ್ತಿತ್ತೆಂದು ನನಗೆ ತೋರಿತು. ಆ ಪುಸ್ತಕದಲ್ಲಿ ಕಡೆಯ ರೋಗವೇ ಪ್ರದರ. ಅದರ ಮುನ್ನೋವುಗಳೂ ನನ್ನಲ್ಲಿದ್ದುದರಿಂದ, ನಾನು ಅದರ ವಿಷಯವನ್ನೂ ಓದಿ ತಿಳಿದು ಪುಸ್ತಕವನ್ನು ಮುಚ್ಚಿ, ಗುಮಾಸ್ತೆಯವರಿಗೊಪ್ಪಿಸಿ ಮನೆಗೆ ಬಂದೆ.

ಹೋಗಿ ಯಾವುದಾದರೂ ಮೆಡಿಕಲ್ ಕಾಲೇಜಿನಲ್ಲಿ ಮಲಗಿಬಿಡಬೇಕೆನಿಸಿತು. ಅಲ್ಲಿ ಓದುವ ಹುಡುಗರಿಗೆ ನಾನೆ ಒಂದು ಆಸ್ಪತ್ರೆ. ನೂರಾರು ಹಾಸಿಗೆಗಳನ್ನು ಹರಡಿ ಅವುಗಳನ್ನೆಲ್ಲಾ ರೋಗಿಗಳನ್ನು ತುಂಬಿ ತುಂಬಿ, ತಮ್ಮ ಕಲಿಕೆಗೋಸ್ಕರ, ಅವರ ಬಾಯೊಳಗೆ ತೆರ್ಮಾಮೀಟರುಗಳನ್ನು ತುರುಕಿ ಅವರನ್ನು ಚುಚ್ಚಿ ಕರೆದು ಕಡಿದು ಕುಯ್ದು ಪೀಡಿಸುವುದಕ್ಕಿಂತ, ಸರ್ವರೋಗ ಸಂಪತ್ತಿನಲ್ಲಿ ಸದಾ ಸೀದು ಹೋಗುತ್ತಿರುವ ನಾನು ಅಲ್ಲಿಗೆ ಹೋದೆನೆಂದರೆ, ಅವರು ನನ್ನ ಸುತ್ತ ನಾಲ್ಕು ಸಾರಿ ಸುಳಿದಾಡಿ ಡಿಗ್ರಿಪಡೆಯಬಹುದಲ್ಲಾ, ಅಂತ ಅನ್ನಿಸಿತು. ಆ ಮೇಲೆ, ಛೆ! ಅಲ್ಲಿ ಇರುವವರಿಗೆ ನನ್ನಷ್ಟು ದೂರದೃಷ್ಟಿಯೂ ಮಿತವ್ಯಯದ ಮೇಲಿನ ಆಸೆಯೂ ಇರಲಾರದು. ನನ್ನನ್ನ ಹುಚ್ಚಾ ಅಂತ ಓಡಿಸಿದರೂ ಓಡಿಸಿಬಿಟ್ಟಾರು, ಎಂದು ಸುಮ್ಮನಾದೆ.

ಆಗ ನನ್ನ ಆಕೆ ಹತ್ತಿರ ಬಂದು 'ಊಟಕ್ಕೆ ಏಳಿ' ಅಂದಳು. ಬರುತ್ತೇನೆ, ಅಂತ ಆಕೆಯನ್ನು ಆಚೆಗೆ ಕಳುಹಿಸಿ, ನನ್ನ ಆಯುಷ್ಯದ ಪರಿಮಾಣವನ್ನು ಅಂದಾಜು ಮಾಡಲು ಪ್ರಾರಂಭಿಸಿದೆ. ಬಲಗೈಯನ್ನು ಎಡಗೈಯಿಂದ ಹಿಡಿದು ಪಲ್ಸ್ ನೋಡಿದೆ. ಎಡಗೈ ಪಲ್ಸ್ ನೋಡಿದೆ. ಮೊದಲು ರಕ್ತಚಲನದ ಸೂಚನೆಯೆ ಸಿಗಲಿಲ್ಲ. ಕಡೆಗೆ ಟಕ್ ಟಕ್ ಏನೋ ಒಂದು ಆಗುತ್ತಿರುವ ಹಾಗೆ ತೋರಿತು. ಗಡಿಯಾರ ಹಿಡಿದುಕೊಂಡು ಎಣಿಸಿದೆ. ನಿಮಿಷಕ್ಕೆ 147 ಅಂತ ಗೊತ್ತುಮಾಡಿಕೊಂಡೆ. ಹೃದಯದ ಮೇಲೆ ಕೈ ಇಟ್ಟೆ. ಹಾಳು ಹೃದಯ ನಿಂತೇಬಿಟ್ಟಿತು. ಸತ್ತೇ ಅಂತ ಕಿರಿಚೋಣವೋ ಅಂತ ಅನುಮಾನಿಸಿದೆ. ಒಳಗಿರುವವಳ ಬಾಯಿಬಡಿತಕ್ಕೆ ಹೆದರಿ ಸುಮ್ಮನಾದೆ. ಬೆನ್ನ ಮೇಲೆ ಎಡಭಾಗವಾಗಿ ಗುದ್ದಿದರೆ ಹೃದಯ ಮತ್ತೆ ಬಡಿಯಲು ಉಪಕ್ರಮಿಸಬಹುದೆಂದು ತೋರಿತು. ಬಲಗೈಯನ್ನು ಮಡಿಸಿ ಬೆನ್ನ ಮೇಲಿಟ್ಟು ಆದಷ್ಟು ಬಲವಾಗಿ ಎಡಮಗ್ಗುಲಲ್ಲಿ ಗುದ್ದಿದೆ. ಒಳಗೆ ಏನೋ ಒಂದು ಅವಾಂತರವಾದ ಹಾಗೆ ತೋರಿತು. ನಾಲಿಗೆ ನೀಡಿದೆ, ಅದರ ತುತ್ತತುದಿ ಕೊಂಚ ಕೆಂಪಗೆ ಕಾಣಿಸಿತು. ಒಂದು ಕಣ್ಣನ್ನು ಮುಚ್ಚಿ ಮತ್ತೊಂದರಿಂದ ನೋಡಿದೆ. ಕೆಂಚಗೆ ಕಾಣಿಸಿತು. ''ದೇವರೇ! ನನ್ನ ಪ್ರಾಣ ಉಳಿಸಪ್ಪ'' ಅಂತ ಕೂಗಿಕೊಂಡೆ. ಎದ್ದೆ; ನನ್ನ ಕುರ್ಚಿಯೊಳಕ್ಕೆ ಧುಂ ಧುಂ ಅಂತ ಬಿದ್ದೆ. ಮೂರ್ಛೆ ಹೋದೆ. ಇನ್ನೂ ಮೂರ್ಛೆ ತಿಳಿದು ಎದ್ದಿಲ್ಲ. ಹಾಗೆಯೆ ಮಲಗಿದೇನೆ.



ಬ್ಯೂಟಿ ಪೇಜಂಟ್‌ಗೆ ನಾನೂ ಅಫಿಸಿಯಲ್ ಏರ್ ಡ್ರೆಸ್ಸರ್ ಆಗಿದ್ದೆಸಾ।

ಸೌಂದರ್ಯ ಸ್ಪರ್ಧೆ - ಸಾಹಿತಿಗಳು ಕಂಡಂತೆ

ಶಿವು

ಅಮಿತಾಭನ ಮನ ಚಿಂತೆಗಳ ಆಗರವಾಗಿತ್ತು. ಹಾಗೆಂದ ಮಾತ್ರಕ್ಕೆ ಅವನೇನು ದಿಕ್ಕು ತೋಚದೆ ಕೈಚೆಲ್ಲಿ ಕುಳಿತಿದ್ದನೆಂದು ಹೇಳಲಾರೆ. ಹೊರನೋಟಕ್ಕೆ ಮೆಲುನಗೆ ಬೀರುವ ಅದಮ್ಯ ಚೈತನ್ಯದ ಚಿಲುಮೆ ಆತ. ಆದರೂ ಅಂದು ಮುಂಜಾನೆ ಜೂಲಿಯಾಳೊಂದಿಗೆ ಅಲ್ಪಾಹಾರ ನಡೆಸಿದ್ದಾಗ, ಆಕೆಯ ತಿದ್ದಿದ ಹುಬ್ಬುಗಳು ಮೇಲೆ ಸರಿದು ಅವನನ್ನು ಪ್ರಶ್ನಿಸಿದಾಗ ಆ ಮೂಕ ಪ್ರಶ್ನೆಯ ಹಿಂದಿನ ನೋವು ಅವನ ಮನವನ್ನು ಸತತವಾಗಿ ಕೊರೆಯುವುದರಲ್ಲಿ ಯಶಸ್ವಿಯಾಗಿತ್ತು. 'ನಾನೆಸಗಿದ ತಪ್ಪೇನು?' ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಂತೆ, ಅಮಿತಾಭನಿಗಿದಿರಾಗಿ ನಿಂದವಳು ಮ್ಯಾಸಡನ್ನಿನ ಚಲುವೆ ವೆರಾ. ತನ್ನ ಎತ್ತರದ ನಿಲುವಿನ ದೆಸೆಯಿಂದ ತನಗರಿವಿಲ್ಲದೆಯೇ, ಇತರರವನ್ನು ಕಣ್ಣು ಕೆಳ ಹಾಯಿಸಿ ನೋಡುತ್ತಿದ್ದ ಅಮಿತಾಭನಿಗೆ, ತನ್ನ ಎತ್ತರಕ್ಕೆ ಸರಿಸಮನಾಗಿ ನಿಂತಿದ್ದ ವೆರಾಳನ್ನು ತಲೆತಗ್ಗಿಸದೇ ನೋಡುವಂತಾದುದು ಒಂದು ಹೊಸ ಅನುಭವ. ಅಮಿತಾಭ, ಲೋಕಾಭಿರಾಮದ ಕುಶಲ ಪ್ರಶ್ನೆ ಕೇಳುವ ಸನ್ನಾಹ ನಡೆಸಿದ್ದಾಗಲೇ. ಚತುರೆ ವೆರಾ ತನ್ನ ಪ್ರಶ್ನೆಯ ಬಾಣವನ್ನು ಅಮಿತಾಭನೆಡೆಗೆಸೆದಳು.

''ಈ ನೇಸರ್ಗಿ ಯಾರು ಮತ್ತು ಏನು?''

ಅತ್ತ ಪ್ರಮೀಳಕ್ಕ ದೇವರ ಮನೆಯಲ್ಲಿ ಭಕ್ತಿಯಿಂದ ಪ್ರಾರ್ಥನೆಗೆ ಶುರು ಹಚ್ಚಿದ್ದಳು. ನಿಸರ್ಗದ ಕುವರಿಯಾದ ಆಕೆಗೆ ನೇಸರ್ಗಿ ಎಂಬ ಹೆಸರು ಚೆನ್ನಾಗಿ ಒಪ್ಪುತ್ತಿತ್ತು. ಪ್ರಾರ್ಥನೆಗೆ ಕುಳಿತ ಪ್ರಮೀಳಕ್ಕನ ಚಿದಾಕಾಶದಲ್ಲಿ ಶಾಂತಿ ನೆಲೆಸಿರಲಿಲ್ಲ. ಅದೇನು ವಿಚಿತ್ರವೋ, ದೇವನಲ್ಲಿ ಕೇಳಲು ಬೇಡಿಕೆಗಳು ಪುಂಖಾನುಪುಂಖವಾಗಿ ಮನದಲ್ಲಿ ಮಿಂಚಿ ಮಾಯವಾಗುತ್ತಿದ್ದವು. ''ಸೌಂದರ್ಯ ಸ್ಪರ್ಧೆ ನಡೆದೇ ಹೋಗುತ್ತದೆ. ಎಂಭತ್ತೆಂಟು ಚಲುವೆಯರು ತನ್ನನ್ನು ಧಿಕ್ಕರಿಸಿ ಬಿನ್ನಾಣದಿಂದ ನಡೆದೇ ಬಿಡುತ್ತಾರೆ'' ಎಂಬ ನಗ್ನ ಸತ್ಯ ಅವಳಿಗೆ ಇದಿರಾಗಿತ್ತು. ಯಾವ ರೀತಿಯ ನಗ್ನತೆಯನ್ನೂ ಸಹಿಸದ ನಿಸರ್ಗ ಕುವರಿಗೆ, ಈ ಬೆತ್ತಲೆ ನಿಂತ ಸತ್ಯ ತನ್ನನ್ನು ಬೇಕೆಂದೇ ಹಂಗಿಸುತ್ತಿರುವಂತೆ ಭಾಸವಾಗಿ......

***

ಸುರುಚಿತ ಸ್ವಪ್ನಮಯ ಕಲ್ಪನಾಕಾಶದಲಿ
ಸಗ್ಗವನೆ ಸೆರೆಗೈದು ಮರ್ತ್ಯ ಪ್ರದೇಶದಲಿ
ಬಂಧಿಸಿಹೆ ಓ ಅಮಿತಾಭ।
ಅಷ್ಟ ಮೇಣ್ ಅಷ್ಟಾದಶ ಅಪ್ಸರಾ ಸಮೂಹದಲಿ
ಮಿಂಚುತಿಹ ಮಳೆಬಿಲ್ಲುಗಳ ವರ್ಣ ಜಾಲವನೆ
ಸೀಳಿ ಮೊಳಗುತಿದೆ, ದಿಕ್ಕು ದಿಕ್ಕಿಗೆ ನಿಸರ್ಗವಾಣಿ
''ಸಾಲ್ಗುಂ, ಸಾಲ್ಗು ಮೀ ಪರಿಹಾಸ್ಯಂ, ನಿಲ್ಗುಂ, ನಿಲ್ಗುಂ
ಈ ಪೆಣ್ಗಳ ಪ್ರದರ್ಶನಂ, ಒಳಿತಲ್ತು ಆರ್ಯಾವರ್ತಕೆ
ಒಳಿತಲ್ತು ಈ ಭರತ ಭೂಮಿಗೆ ಈ ಅಪಚಾರಂ''
ನಿಸರ್ಗ ಕುವರಿ ನೇಸರ್ಗಿ, ನಿಸರ್ಗ ಸದೃಶ
ನೇರವಾಣಿಯಲಿ, ಚೆಲ್ಲುತಿಹ ನುಡಿ ಮುತ್ತುಗಳನ್
ಅರಸರಸಿ, ಮಾಲೆಯನೆ ಕೋದರ್, ಸ್ಪರ್ಧಾ ವಿರೋಧಿಗಳ್
''ಇಂದೆನ್ನ ಬಾಳು ಪಾವನವಾದುದಲ್ತೆ, ರಕ್ಷಿಸಲಿ
ದೇವ ಮಾರ್ಲೇ ದಂಪತಿಗಳ - ಆಮೆನ್.'' ಎಂದನಮಿತಾಭ.

***

ಕ್ಷಮಿಸಿ, ಈ ವಿಶ್ವಸುಂದರಿಯರ ಸ್ಪರ್ಧೆಯನ್ನು ಬರಿಯ ಒಂದು ಇವೆಂಟ್ ಎಂದು ಪರಿಗಣಿಸುವುದು ತಪ್ಪಾಗುತ್ತದೆ. ಇದು ನಮ್ಮಂತಹ ಪತ್ರಕರ್ತರಿಗೆ, ಕರುಣಾಮಯಿ ಭಗವಂತನು ದಯಪಾಲಿಸಿದ ವರ. ನಾನು ಹೀಗೆ ಹೇಳಿದಾಗ ಇದೇನು, ಈತ ಎಂದಿನಿಂದ ದೈವಭಕ್ತನಾದ ಎಂದು ನೀವು ಹುಬ್ಬೇರಿಸಬಹುದು. ಹೆದರಬೇಡಿ. ನಾನೇನು ಬ್ರಾಹ್ಮಣ ಪೂಜಾರಿಗಳಂತೆ, ಶೈವ ಜಂಗಮರಂತೆ ಎಂದೂ ದೇವರನ್ನು ಆರಾಧಿಸಿದವನಲ್ಲ. ಆದರೂ ಈ ಮಾಗಿಯ ಚಳಿಯಲ್ಲಿ ಉಣ್ಣೆಯ ಸ್ವೆಟರ್ ಧರಿಸಿ, ಬೆಳಗಿನ ವಾಕ್ ಹೋಗುವಾಗ ಕೋಗಿಲೆಯೊಂದು 'ಕುಹೂ' ಎಂದು ಹಾಡಿದರೆ, "God is in heaven, all is right with the world' ಎಂದು ನನ್ನಂತಹವನಿಗೂ ಅನ್ನಿಸುವುದುಂಟು. ಈ ವಿಶ್ವಸುಂದರಿಯರ ಬಗ್ಗೆ ಬರೆಯುವುದೇ ಒಂದು ಮೋಜು. ಮೊನ್ನೆ ಪತ್ರಿಕೆಯೊಂದರಲ್ಲಿ ಸ್ವೀಡನ್ ಸುಂದರಿಯ ಬಗ್ಗೆ ಓದುತ್ತಿದ್ದೆ. ಅಕಸ್ಮಾತ್ತಾಗಿ ನನ್ನ ಕೈ ಕನ್ನಡಕಕ್ಕೆ ತಾಕಿ, ಕನ್ನಡಕ ಕೆಳಕ್ಕೆ ಬಿತ್ತು. ಗಾಜು ಒಡೆದ ಕನ್ನಡಕವನ್ನು ನೆಲದಿಂದ ಎತ್ತಿ ಮೇಜಿನ ಮೇಲೆ ಇಡುವುದು, ಡಿಸ್ಕ್ ಸ್ಲಿಪ್ ಆದ ನನ್ನಂತಹವನಿಗೆ ಮಹಾ ಪ್ರಯಾಸದ ಕೆಲಸ. ಈ ಜನತಾದಳದ ಖೂಳರ ಆಳ್ವಿಕೆಯಲ್ಲಿ ಇನ್ನೇನನ್ನು ತಾನೆ ನಿರೀಕ್ಷಿಸಲು ಸಾಧ್ಯ. ಒಟ್ಟಿನಲ್ಲಿ ವಿಶ್ವಸುಂದರಿಯರ ಬಗ್ಗೆ ಇಷ್ಟೆಲ್ಲಾ ವಿವರವಾಗಿ ಬರೆಯಲು ಅವಕಾಶವಿತ್ತ ಅಪರಂಜಿ ಸಂಪಾದಕ, ಅಷ್ಟೇನೂ ಕೆಟ್ಟವನಿರಲಾರ.....

***

ಮಿಸ್ಸ್ ಲೋಕದ ಪಂದ್ಯ-ಪಕ್ಷಪಾತದ ಗಣಿಯು
ಯುತವು ನಂಮದು ಕೊನೆಯ ಶ್ವೇತ ಸುಂದರಿಗೆ
ಸ್ತ್ರೀ ಸಮೂಹಕ್ಕೆಲ್ಲ ಮೋಸವಾಯ್ತು ದರಿಂದೆ,
ಲೇಸ ಮಾಡುವುದೆಂತೋ - ಮಂಕುತಿಮ್ಮ



ನಾನು ದೊಡ್ಡೋಳಾದ್ಮೇಲೆ ಲಾಯರ್ ಆಗಿ ಪೇಜಂಟ್‌ಗೆ ಪ್ರತಿಭಟನೆ ಮಾಡ್ತೀನಿ ಅತ್ತೆ!

ಹಾಸ್ಯೋತ್ಸವ-'96

ಎಚ್.ಎಸ್. ಕಲಾಕ್ಷೇತ್ರ 25ನೇ ಡಿಸೆಂಬರ್ '96

ನಾ. ಕಸ್ತೂರಿಯವರ ಜನ್ಮಶತಾಬ್ಧಿ

ಪ್ರಿಯರೇ,

ಇದೋ, ಇಡೀ ದಿನದ ಹಾಸ್ಯ ರಂಜನೆ ಕಾರ್ಯಕ್ರಮ ಸಿದ್ಧವಿದೆ.

★ ಮಾಸ್ಟರ್ ಹಿರಣ್ಣಯ್ಯ, ಡಾ|| ಪ್ರಭುಶಂಕರ್, ಶ್ರೀ ಎಸ್.ಎನ್. ಶಿವಸ್ವಾಮಿ, ಡಾ|| ಎಚ್.ಕೆ. ರಂಗನಾಥ್ ಅವರುಗಳಿಂದ 'ಕಸ್ತೂರಿ' ಪರಿಮಳ.

★ ಪ್ರೊ. ಅ.ರಾ. ಮಿತ್ರ, ಶ್ರೀ ಎಚ್.ಎಲ್. ಕೇಶವಮೂರ್ತಿ ಅವರಿಂದ 'ಕೆಣಕು'

★ ಶ್ರೀ ವಾದಿರಾಜ್, ಎ.ಎಸ್. ಮೂರ್ತಿ ಮತ್ತು ವಿ.ಕೆ. ದೊರೆಸ್ವಾಮಿ ಅವರುಗಳ 'ಕಚಗುಳಿ'

★ ಜೊತೆಜೊತೆಗೆ ಗಾನ ವಿನೋದಿನಿ ತಂಡದವರಿಂದ 'ಅಣಕವಾಡುಗಳು' ಮತ್ತು 'ಗಗ್ಗಯ್ಯನ ಗಡಿಬಿಡಿ' ನಾಟಕ.

★ ಹಲವಾರು ಹಾಸ್ಯ ಪುಸ್ತಕ ಬಿಡುಗಡೆ ಮತ್ತು ವ್ಯಂಗ್ಯ ಚಿತ್ರ ಪ್ರದರ್ಶನ.

ಕಾರ್ಯಕ್ರಮ 10-30ಕ್ಕೆ ಆರಂಭ.

ನಿಮ್ಮ ಊಟ, ತಿಂಡಿ ಚಿಂತೆ ನಮಗಿರಲಿ.

ತಮ್ಮ ಆಗಮವನ್ನು ಎದುರುನೋಡುವ

ಹಾಸ್ಯಬ್ರಹ್ಮ ಮತ್ತು ಅಪರಂಜಿವೇದಿಕೆ ಪರವಾಗಿ

ಎಂ. ಶಿವಕುಮಾರ್

ಫಾಕ್ನರ್ ಒಬ್ಬ ಪೋಸ್ಟ್‌ಮ್ಯಾನ್ ಆಗಿದ್ದರೆ....

ಎಂ.ಎಸ್.ಕೆ. ಪ್ರಭು

ಪ್ರತಿಷ್ಠಿತ ರಾಜಕೀಯ ಆರೋಪಿಯೊಬ್ಬರ ನಿರೀಕ್ಷಣಾ ಜಾಮೀನಿನ ಅರ್ಜಿಯನ್ನು ದೆಹಲಿಯ ಉಚ್ಚನ್ಯಾಯಾಲಯ ಪರಿಶೀಲಿಸುತ್ತಿದ್ದಾಗ ವಕೀಲರೊಬ್ಬರು ಈ ಖಟ್ಲೆಯಲ್ಲಿ ನ್ಯಾಯಮೂರ್ತಿಗಳು ಅನುಸರಿಸಬೇಕಾದ ವಿಧಿ ವಿಧಾನ ಏನು ಎಂದು ವಿವರಿಸತೊಡಗಿದರಂತೆ, ಇತ್ತೀಚೆಗೆ ನ್ಯಾಯ ಮೂರ್ತಿಗಳು ಕೇಳುವಷ್ಟು ಕೇಳಿ ಕಡೆಗೆ, ನ್ಯಾಯಾಲಯ ಏನು ಮಾಡಬೇಕು, ಅದರ ಕಾರ್ಯವ್ಯಾಪ್ತಿ ಎಷ್ಟು ಎಂದು ನೀವು ತಿಳುವಳಿಕೆ ಕೊಡುವ ಅಗತ್ಯವಿಲ್ಲ. ನಾನೇನು ಪೋಸ್ಟಾಫಿಸಲ್ಲ, ಎಂದು (ಸ್ವಲ್ಪ ಖಾರವಾಗಿಯೇ) ನುಡಿದು ವಕೀಲರ ವಾದವನ್ನು ಮೊಟಕುಗೊಳಿಸಿದರಂತೆ. ನ್ಯಾಯಮೂರ್ತಿಗಳ ಇಂಗಿತವನ್ನು ಗಮನಿಸಬೇಕು.

ಪೋಸ್ಟಾಫೀಸುಗಳ ಬಗ್ಗೆ ನಮ್ಮ ನಾಗರಿಕತೆಯಲ್ಲಿ ತಾತ್ಸಾರ ಮನೋಭಾವ ಸರ್ವೇಸಾಧಾರಣವಾಗಿ ಬೆಳೆದು ಬಂದಿದೆ. ನಮ್ಮ ದೇಶದಲ್ಲಷ್ಟೇ ಅಲ್ಲ, ಫಾರೀನ್‌ನಲ್ಲೂ ಅದರ ಸ್ಥಾನಮಾನಗಳ ಬಗ್ಗೆ ಉದಾಸೀನ ಮನೋಭಾವ ಇದೆ. ಉದಾಹರಣಾರ್ಥ: ಸುಪ್ರಸಿದ್ಧ ಅಮೆರಿಕನ್ ಕಾದಂಬರಿಕಾರ ವಿಲಿಯಂ ಫಾಕ್ನರ್ (ಸುಪ್ರಸಿದ್ಧನಾಗುವ ಮುಂಚೆ) ಒಂದು ಪೋಸ್ಟಾಫೀಸಿನಲ್ಲಿ ಗುಮಾಸ್ತೆಯಾಗಿ ಕೆಲಸ ಮಾಡುತ್ತಿದ್ದನಂತೆ. ಒಂದು ದಿನ ಬೇಸತ್ತು ತನ್ನ ಚಾಕರಿಗೆ ರಾಜೀನಾಮೆ ಗೀಚಿ, ಹಾಯ್ ಎಂದು ನಿಸೂರಾಗಿ ಉಸಿರಾಡಲು ಸುರು ಮಾಡಿದನಂತೆ. ಯಾಕೆ ಸುಮ್ಮನೆ ರಾಜೀನಾಮೆ ಕೊಟ್ಟು ಅನ್ಯಾಯವಾಗಿ ಕೆಲಸ ಕಳೆದುಕೊಂಡೆ, ಎಂದು ಯಾರೋ ಸ್ನೇಹಿತರು ಅನುಕಂಪದಿಂದ ಕೇಳಿದಾಗ ಅವನು, ಐದು ಸೆಂಟ್ ಜೇಬಿನಲ್ಲಿಟ್ಟುಕೊಂಡು ಒಂದು ಸ್ಟಾಂಪ್ ವ್ಯಾಪಾರಕ್ಕೆ ಬರುವ ಟಾಮ್ ಡಿಕ್, ಹ್ಯಾರಿಗಳ ಬೆರಳು ಸನ್ನೆಗೆ ತಲೆಬಾಗಲು ನನಗಿಷ್ಟವಿಲ್ಲ, ಎಂದನಂತೆ. ಆಮೇಲೆ ಅವನು ಸಾಧಿಸಿದ ಪ್ರಸಿದ್ಧಿಯನ್ನು ಗಣನೆಗೆ ತಂದುಕೊಂಡು ಫಾಕ್ನರ್‌ನನ್ನು ನಾವು ಕ್ಷಮಿಸಬಹುದು. ಆದರೂ ಪೋಸ್ಟಾಫೀಸುಗಳ ಬಗ್ಗೆ ಅಲ್ಲಿಯ ಸಿಬ್ಬಂದಿಯ ಬಗ್ಗೆ ಅವನ ಅಭಿಪ್ರಾಯ ಇನ್ನೂ ಕೊಂಚ ಉದಾರವಾಗಿರಬಹುದಿತ್ತೇನೋ ಎಂದು ಅನ್ನಿಸದೆ ಬಿಡುವುದಿಲ್ಲ. ಪೋಸ್ಟಾಫೀಸು ಇಂತಹ ಅಪಖ್ಯಾತಿಗೆ ಯಾವಾಗ, ಹೇಗೆ, ಯಾರಿಂದ ಗುರಿಯಾಗಲು ಶುರುವಾಯಿತು ಎಂದು ಸಂಶೋಧನೆ ಮಾಡಿ ಐತಿಹಾಸಿಕ ಸತ್ಯವನ್ನು ಬಯಲುಮಾಡಿ ಯಾರಾದರೂ ಕೀರ್ತಿವಂತರಾಗಬಹುದು.

ಪೋಸ್ಟಾಫೀಸಿನ ಪ್ರಾಮುಖ್ಯತೆಯನ್ನು ನಾವು ಹೇಗೆ ತಾನೆ ಕಡೆಗಣಿಸಲು ಸಾಧ್ಯ? ಒಂದು ಊರಿನ ಮ್ಯಾಪಿನಲ್ಲಿ, ಮಂದಗೆರೆಯಂತಹ ನಮ್ಮ ಹಳ್ಳಿಯಲ್ಲೂ (ನಮ್ಮೂರಿಗೆ

ಒಂದು ಮ್ಯಾಪ್ ಇತ್ತೋ ಇಲ್ಲವೋ ಗೊತ್ತಿಲ್ಲ, ನಾನು ನೋಡಿಲ್ಲ) ಪೋಸ್ಟಾಫೀಸು ಒಂದು ಲ್ಯಾಂಡ್‌ಮಾರ್ಕ್. ಪೋಸ್ಟಾಫೀಸು ವ್ಯಕ್ತಿತ್ವವನ್ನು ಬೆಳೆಸಲು ಪ್ರಮುಖ ಪಾತ್ರ ವಹಿಸುತ್ತದೆಂದು ನನ್ನ ನಂಬಿಕೆ. ನನಗೂ ಪೋಸ್ಟಾಫೀಸಿಗೂ ಪ್ರಾಚೀನವಾದ ಸಂಬಂಧ. ನಮ್ಮೂರಿನ ಪೋಸ್ಟಾಫೀಸು ಎಂದರೆ ನನಗೆ ಮಾಂತ್ರಿಕ ಆಕರ್ಷಣೆ. ಚಿಕ್ಕಂದಿನಲ್ಲಿ ನಾನು ದಿನಾ ಬೆಳಗ್ಗೆ ಎದ್ದು ಪೋಸ್ಟಾಫೀಸಿಗೆ ಹೋಗಿ ಕಾಗದಗಳಿದ್ದರೆ ಮನೆಗೆ ತರುತ್ತಿದ್ದೆ. ಬೆಳಗಿನ ಮೇಲ್ ಟ್ರೈನಿಲ್ಲಿ ಬರುವ ಪೋಸ್ಟ್ ಬ್ಯಾಗನ್ನು ತಂದು ಪೋಸ್ಟ್ ಮಾಸ್ಟರ್-ಕಮ್-ಆಂಜನೆಯನ ಗುಡಿ ಪೂಜಾರಿ ಕಾಗದಗಳನ್ನು ಮೇಜಿನ ಮೇಲೆ ಸುರಿದು ಅಳತೆವಾರು ಜೋಡಿಸಿಟ್ಟುಕೊಳ್ಳುತ್ತಿದ್ದರು. ಆಮೇಲೆ ಅವುಗಳ ಮೇಲೆ ವಿಧಿವತ್ತಾಗಿ, ಲಯಬದ್ಧವಾಗಿ ಠಸ್ಸೆ ಒತ್ತುತ್ತಿದ್ದರು. ಅನಂತರ ಅವುಗಳ ಮೇಲಿನ ವಿಳಾಸದಾರರ ಹೆಸರುಗಳನ್ನು ಛಂದೋಬದ್ಧನಾಗಿ ಅಷ್ಟೋತ್ತರ ನಾಮಾವಳಿಯಂತೆ ಕೂಗಿ ಹೇಳುತ್ತಿದ್ದರು. ಹಾಜರಿದ್ದ ವಿಳಾಸದಾರರೇ ಅವರ ಪ್ರತಿನಿಧಿಗಳೇ ತಮ್ಮ ತಮ್ಮ ಪೋಸ್ಟ್ ಪಡೆದುಕೊಂಡು ಮರಳುತ್ತಿದ್ದರು ಉಳಿದವುಗಳನ್ನು ಪೋಸ್ಟ್‌ಮಾಸ್ಟರ್ ಗಡಿಬಿಡಿಯಿಲ್ಲದೆ ಸಾವಕಾಶವಾಗಿ ಬಟವಾಡೆ ಮಾಡುತ್ತಿದ್ದರು. ನಮ್ಮ ಹಳ್ಳಿಯ ಪೋಸ್ಟಾಫೀಸು ಸುತ್ತಾ ಹತ್ತಾರು ಹಳ್ಳಿಗಳ ಅಂಚೆ ಅಗತ್ಯಗಳನ್ನು ಶ್ರದ್ಧೆಯಿಂದ ಪೂರೈಸುತ್ತಿತ್ತು.

ಜಲಂಧರದಲ್ಲೊ, ಗದಗಿನಲ್ಲೊ, ಪಾಟ್ನಾದಲ್ಲೋ, ಪುಣೆಯಲ್ಲೋ ತಯಾರಾಗುವ ಕೆಲವು ವಸ್ತುಗಳ ಜಾಹಿರಾತುಗಳು ನನ್ನ ಗಮನ ಸೆಳೆಯುತ್ತಿದ್ದವು. ಕೇವಲ ನೂರು ರೂಪಾಯಿಗಳಿಗೆ ಒಂದು ಮಾಂತ್ರಿಕ ಉಂಗುರ, ಇಪ್ಪತ್ತೈದು ರೂಪಾಯಿಗಳಿಗೆ ವಾಚು, ಎಪ್ಪತ್ತೇ ರೂಪಾಯಿಗಳಿಗೆ ರೇಡಿಯೋ ಮುಂತಾದ ವಸ್ತುಗಳನ್ನು ಪೋಸ್ಟ್ ಮೂಲಕ ಮನೆ ಬಾಗಿಲಿಗೆ ತಲುಪಿಸುತ್ತಿದ್ದರು. ಆದರೆ ಅಂತಹ ಜಾಹಿರಾತುಗಳಲ್ಲಿ ಟಪಾಲು ಹಾಸಲು ಪ್ರತ್ಯೇಕ ಎಂದಿರುತ್ತಿತ್ತು. ಅದು ನನ್ನ ಆಸಕ್ತಿಯ ವಿಷಯ. ಟಪಾಲನ್ನಾಗಲೀ, ಬೇರೆನನ್ನಾಗಲಿ ಹಾಸಲು ಏನು, ಯಾಕೆ ಪ್ರತ್ಯೇಕ ಎಂಬ ಜಿಜ್ಞಾಸೆ ಎಷ್ಟೋ ಕಾಲ ನನ್ನನ್ನು ಕೊರೆಯುತ್ತಿತ್ತು.

ಪರ ಊರುಗಳಿಗೆ ಬರೆದ ಕಾಗದಗಳನ್ನು ಪೋಸ್ಟ್ ಮಾಡಲು ನಮ್ಮ ತಂದೆ ನನ್ನ ಕೈಗೆ ಕೊಡುತ್ತಿದ್ದರು. ಪೋಸ್ಟಾಫೀಸಿನ ಮುಂದಿದ್ದ ಉದ್ದನೆಯ ಕೆಂಪು ಡ್ರಮ್ಮಿನ ಬಾಯಿಯಲ್ಲಿ ಕಾಗದವನ್ನು ಹಾಕಿ, ಇದು ಬೇರೆ ಊರನ್ನು ಹೇಗಾದರೂ ಸೇರುತ್ತದೋ ಎಂದು ಬೆರಗುಪಟ್ಟಿದ್ದೆ. ಡಬ್ಬಿಯ ಕೆಳಗೆ ಭೂಗತ ಸುರಂಗಮಾರ್ಗಗಳಿರಬಹುದೆಂದು ಕಲ್ಪಿಸಿಕೊಳ್ಳುತ್ತಿದ್ದೆ. ಒಂದು ಸಲ ಈ ನಿಗೂಢ ರಹಸ್ಯದ ಬಗ್ಗೆ ತಂದೆಯವರನ್ನು ಕೇಳಿದಾಗ ಅವರು ಅಂಚೆವ್ಯವಸ್ಥೆಯನ್ನು ವಿವರಿಸಿ ನನ್ನ ರೊಮ್ಯಾಂಟಿಕ್ ಫ್ಯಾಂಟಸಿಯನ್ನು ನಾಶಮಾಡಿದ್ದರು. ಅಯ್ಯೋ! ಇಷ್ಟೇನಾ ಎಂದು ಆಗ ನನಗೆ ನಿರಸನವಾದರೂ ಜನರಲ್ ನಾಲೆಡ್ಜ್ ಉತ್ತಮವಾಯಿತೆನ್ನಿ. ಜನರಲ್ ನಾಲೆಡ್ಜ್ ಉತ್ತಮವಾದಷ್ಟೂ ಭಾವನಾಕೋಶ ಬಡವಾಗುತ್ತದೇನೋ ಎಂದು ಇತ್ತೀಚೆಗೆ ಅನ್ನಿಸತೊಡಗಿದೆ. ತಂದೆಯವರು ಕೊಟ್ಟವಿವರಣೆ ಬೆಳಗಿನ ಮೇಲ್ ಟ್ರೈನ್‌ನಲ್ಲಿ ಟಪಾಲು ಬ್ಯಾಗು ಬರುವುದಕ್ಕೆ

ಅನುಗುಣವಾಗಿತ್ತಾಗಿ ಬೇರೆ ನಿಗೂಢಗಳು ತಲೆ ಎತ್ತಲಿಲ್ಲ.

ಹಳ್ಳಿ ಸ್ಕೂಲಿನಲ್ಲಿ ಕುಂಡಿಹರಿದ ಚೆಡ್ಡಿಯ ಸಹಪಾಠಿಗಳಿದ್ದರು. ಮೆಲ್ಲನೆ ಹೆಜ್ಜೆ ಮೇಲೆ ಹೆಜ್ಜೆ ಇಟ್ಟುಕೊಂಡು ಹಿಂದಿನಿಂದ ಬಂದು ತೂತನ್ನು ಪರಟು ಮುಚ್ಚಿದ್ದರೆ, ಅದನ್ನೆತ್ತಿ ಚೆಡ್ಡಿ ಹರಕಿನಲ್ಲಿ ರದ್ದಿ ಕಾಗದದ ತುಣುಕನ್ನು ತೂರಿಸಿ, 'ಪೋಸ್ಟ್' ಎಂದು ಜೋರಾಗಿ ಕೂಗಿ ಓಡಿಹೋಗುವುದು ಒಂದು ಎಳೆಯರ ಜನಪ್ರಿಯ ಕ್ರೀಡೆಯೇ ಆಗಿತ್ತು. ಅಂತಹ ಬಾಯಿಬಿಟ್ಟ ತೂತುಗಳ ಪತ್ತೆಯಾದಾಗ ರದ್ದಿ ಸಿಕ್ಕದಿದ್ದರೆ, ತಕ್ಷಣ ರಫ್ ನೋಟ್ ಬುಕ್ಕೋ, ನೀಟ್ ನೋಟ್ ಬುಕ್ಕೋ ಯಾವುದೋ ಒಂದರ ಹಾಳೆ ಹರಿದು ಬಲಿಕೊಡಲು ಹಿಂದುಮುಂದು ನೋಡುತ್ತಿರಲಿಲ್ಲ.

ಮುಂದೆ ಕಾಲೇಜು ಸೇರಿದಾಗ ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಪೋಸ್ಟ್‌ಮ್ಯಾನ್‌ಗೆ ಕಾಯುತ್ತಾ ನಿರೀಕ್ಷೆ, ಕಾತುರಗಳಿಂದ ತುಂಬಿತುಳುಕುತ್ತಾ ಕಾಲೇಜಿನ ಲೌಂಜ್ ಬಳಿ ಸೇರುತ್ತಿದ್ದ ವಿದ್ಯಾರ್ಥಿಗಳ ಪೈಕಿ ನಾನೂ ಒಬ್ಬನಾಗಿದ್ದೆ. ಪೋಸ್ಟ್‌ಮ್ಯಾನ್ ಗೋಚರಿಸಿದ ಕೂಡಲೆ ಅವನನ್ನು ಮುತ್ತಿ ಅವನು ಚೀಲದಿಂದ ಎಂ.ಓ. ಫಾರ್ಮ್‌ಗಳನ್ನು ತೆಗೆದು ಹೆಸರುಗಳನ್ನು ಓದುವುದಕ್ಕಾಗಿ ತುದಿಗಾಲಿನಮೇಲೆ ನಿಲ್ಲುತ್ತಿದ್ದೆವು. ಪೋಸ್ಟ್‌ಮ್ಯಾನ್ ಸಾವಧಾನವಾಗಿ ದರ್ಬಾರ್ ಟೀವಿಯಿಂದ ಗಂಭೀರವಾಗಿ ಅದೃಷ್ಟವಂತರ ಹೆಸರುಗಳನ್ನು ಉದ್ಘೋಷಿಸುತ್ತಿದ್ದ. ಅವನ ಆದೇಶವನ್ನು ಅನುಸರಿಸಲು ನಮಗೇನೂ ಹೀನಾಯವೆನಿಸುತ್ತಿರಲಿಲ್ಲ. ಅಷ್ಟೊಂದು ಜನ ವಿದ್ಯಾರ್ಥಿಗಳು ತನ್ನ ಸುತ್ತ ನೆರೆದು ತನ್ನ ಅಣತಿಗಾಗಿ ಕಾಯುತ್ತಿರುವುದು ಅವನಿಗೂ ಒಂದು ಅಂತಸ್ತನ್ನು ತಂದುಕೊಟ್ಟಿತ್ತು. ನಾವೇನೂ ಯಃಕಶ್ಚಿತ್, ಟಾಮ್, ಡಿಕ್, ಹಾರಿಗಳೆಂದೂ ನಮಗೆ ಅನ್ನಿಸುತ್ತಿರಲಿಲ್ಲ. (ಫಾಕ್ನರ್ ಏನಾದರೂ ಇಂತಹ ಒಬ್ಬ ಪೋಸ್ಟ್‌ಮಾನ್ ಆಗಿದ್ದರೆ...)

ಕೆಲಸಕ್ಕೆ ಬೇಟೆಯಾಡುವ ಮುಂದಿನ ಹಂತದಲ್ಲಿ ಇಂಟರ್‌ವ್ಯೂಗಳನ್ನು ಎದುರುನೋಡುತ್ತಾ ಬುಲಾವಿಗೆ ಕಾಯುತ್ತಾ ಅದೇ ಬಗೆಯ ಸಂಭ್ರಮೋದ್ವೇಗಗಳನ್ನು ಅನುಭವಿಸಿದ್ದೆ. ಇದೆಲ್ಲಾ ಒಬ್ಬ ಪೋಸ್ಟ್‌ಮ್ಯಾನ್‌ನಿಂದ ಸಾಧ್ಯವಾಯಿತೆಂದರೆ... ಅವನು ನಮ್ಮ ಆಶೆಗಳ, ವಿಶ್ವಾಸದ, ಸಂತಸದ ಸಂಕೇತ. (ಕೆಟ್ಟಸುದ್ದಿದೂತನೂ ಆಗಬಹುದು. ಅವನದೇನುತಪ್ಪು?)

ಎಪ್ಪತ್ತರ ದಶಕದಲ್ಲಿ ಧಾರವಾಡದಲ್ಲಿ ನೆಲೆಸಲು ಹೋದಾಗ ನನಗೂ ಪೋಸ್ಟ್‌ಮ್ಯಾನ್ ರಘುವಿಗೂ ಗಾಢವಾದ ಸ್ನೆಹ ಬೆಳೆಯಿತು. ಅವನ ಮಾನವೀಯ ಕಾಳಜಿಗಳು ತೀರ ಅತಿರೇಕ ಎನ್ನುವಷ್ಟು ಇದ್ದರೂ ಅಂಚೆ ಸೋದರ ವರ್ಗದ ಬಗ್ಗೆ ನನ್ನ ಅಂಧಾಭಿಮಾನ (ಎನ್ನಿ, ಬೇಕಾದರೆ) ವರ್ಧಿಸಿತು. ಅವನು ಎಲ್ಲರಿಗೂ, ಎಲ್ಲ ಸಮಯಗಳಲ್ಲೂ ನೆರವು ನೀಡಲು ಆಯಾಚಿತವಾಗಿ ಮುಂದಾಗಿ ಮುಂಗಾಲು ಪುಟಿಗೆ ಪ್ರದರ್ಶಿಸುತ್ತಿದ್ದ. ಭೇಟಿಕೊಡುವವರ ಮನೆಯವರ ಯೋಗಕ್ಷೇಮವನ್ನು ತಪ್ಪದೆ ವಿಚಾರಿಸಿಕೊಂಡು ಸಣ್ಣಪುಟ್ಟ ಕೆಲಸಗಳಲ್ಲೂ ಸಹಾಯ ಹಸ್ತಚಾಚುತ್ತಿದ್ದ. ಒಂದುಸಲ ನೆರೆಯವರೊಬ್ಬರಲ್ಲಿ ಒಂದು ಸಾವು ಸಂಭವಿಸಿತು. ರಘು ವಿಳಂಬವಿಲ್ಲದೆ ತನ್ನ ಬೀಟ್ ಮುಗಿಸಿ ಅವರ

ಮನೆಯಲ್ಲಿ ಹಾಜರಾದ. ಜೊತೆಯಲ್ಲೇ ಅಂತ್ಯಸಂಸ್ಕಾರಕ್ಕೆ ಬೇಕಾದ ಪರಿಕರಗಳನ್ನೆಲ್ಲಾ ತಂದಿದ್ದ. ಅವರ ಮನೆಯಲ್ಲಿ ಬೇರಾರೂ ಇಂತಹ ಕೆಲಸಗಳನ್ನು ನಿಭಾಯಿಸುವವರು ಇಲ್ಲದಿದ್ದುದರಿಂದ ಅವನ ಸಮಯೋಚಿತ ಸಹಾಯ ಸಂತಪ್ತ ಕುಟುಂಬಕ್ಕೆ ಅಮೂಲ್ಯವೆನಿಸಿತು.

ಸುಪ್ರಸಿದ್ಧ ಮರಾಠಿ ಹಾಸ್ಯ ಸಾಹಿತಿ ಪು.ಲ. ದೇಶಪಾಂಡೆ 'ನನ್ನ ಪೌಷ್ಟಿಕ ಜೀವನ' ಎಂಬ ಒಂದು ಕಟುಹಾಸ್ಯ ಲೇಖನ ಬರೆದಿದ್ದಾರೆ. ಇದು ಒಂದು ರೇಡಿಯೋ ಸಂದರ್ಶನದ ರೂಪದಲ್ಲಿದೆ. ರೇಡಿಯೋದ ನುರಿತ, ಅನುಭವೀ ಸಂದರ್ಶಕ ಒಬ್ಬ ಪೋಸ್ಟ್‌ಮ್ಯಾನ್‌ನನ್ನು ಸಂದರ್ಶಿಸಿದಾಗ ಅವನ ಉದಾತ್ತ ಜೀವನಾದರ್ಶಗಳು, ನಿಸ್ವಾರ್ಥ ಸೇವೆ, ಪರೋಪಕಾರೀ ಮನೋಭಾವಗಳನ್ನು ಯದ್ವಾತದ್ವಾ ಹೊಗಳುತ್ತಾನೆ. ಸಂದರ್ಶನದ ಪ್ರಸಾರ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲೆ (ಇದೊಂದು ಲೈವ್ ಬ್ರಾಡ್‌ಕಾಸ್ಟ್) 'ಪೌಷ್ಟಿಕ' ಎಂಬ ಪದ 'ಪೋಸ್ಟ್' ನಿಂದ ಬಂದದ್ದೆಂದು ಶ್ರೋತೃ ಗ್ರಹಿಸುತ್ತಾನೆ. (ಸಂದರ್ಶನ ತುಂಬಾ ಮುಂದುವರೆದರೂ ಪೋಸ್ಟ್‌ಮ್ಯಾನ್‌ನ ಜೀವನದ ತಾಪತ್ರಯಗಳು, ಸಂಬಳ-ಸಾರಿಗೆ, ರೋಗ-ರುಜಿನ, ತಂಟೆ-ತಕರಾರು, ಕಷ್ಟ-ಸುಖ, ಸಾಲ-ಸೋಲ ಮುಂತಾದ ಗೋಳುಗಳ ಮಾತೇ ಇಲ್ಲ) ಕೊನೆಗೆ ಮೂಲಂಗಿ ಗೆಡ್ಡೆಯೊಂದನ್ನು ಅದರ ಸೊಪ್ಪಿನ ಕಾಂಡದಿಂದ ಮುರಿದು ಬೇರ್ಪಡಿಸಿದಂತಹ ಕರ್‌ಕರ್ ಶಬ್ದ ಶ್ರೋತೃಗಳಿಗೆ ಕೇಳಿಸುತ್ತದೆ. ನಿಮ್ಮ ಊಹೆ ದಿಟ. ಸಂದರ್ಶಕನ ಪ್ರಲಾಪ ಪ್ರಹಾರಗಳಿಂದ ಕೆರಳಿದ ಪೋಸ್ಟ್‌ಮ್ಯಾನ್ ಇನ್ನು ತಡೆಯಲಾರದೆ ಅವನ ಗೋಣು ಮುರಿದಿರುತ್ತಾನೆ. ಅವನಿಗೆ ಹಾಗೇ ಆಗಬೇಕು ಅಲ್ಲವೇ?

ಅನರ್ಥಕೋಶ

ಎನ್.ಬಿ. ಬದರೀನಾರಾಯಣ

ಆತನು Lbw ಆದ- ಅಂದರೆ ಹುಡುಗಿಯನ್ನು ಪ್ರೇಮಿಸಿ ಮದುವೆಯಾಗಬೇಕಾದವ. Love before Wedding.

ಪಂಜಾಬ್ ಪೋಲೀಸ್

ಕಮೀಷನರ್ ಗಿಲ್- ಇವನ ತಪ್ಪೇನೂ ಇಲ್ಲ. ಎಲ್ಲಾ ಆತನ ತಂದೆ-ತಾಯಿಗಳದ್ದೇ. ಈತನಿಗೆ "ಗಿಲ್ಲು" ಅಂತ ನಾಮಕರಣ ಮಾಡಿದ್ದು.

ಬರೀ ಹೊಟ್ಟೆ

ಅ.ರಾ. ಮಿತ್ರ


ಹೊಟ್ಟೆನೋವು ಸಾಯ್ತಾ ಇದ್ದೆ
ಹೋದೆ ವೈದ್ಯರ ಹತ್ತಿರ
ಡಾಕ್ಟರರೆಂದರು ''ಈಗ ಬಂದ್ರೆ ಹ್ಯಾಗ್ರಿ
ಚೆನ್ನಾಗಿ ತಿಂದು ಬಂದಿದೀರ

ಬೆಳಗ್ಗೆ ಬನ್ನಿ ಬರಿ ಹೊಟ್ಟೇಲಿ
ನೋಡಿಬಿಟ್ಟು ಕೊಡ್ತೀನಿ ಮದ್ದು....''

ಮನೆಗೆ ಬಂದೆ ಹೆಂಡತಿಗೆ ಹೇಳಿದೆ
''ಬೆಳಗ್ಗೆ ನಾನು ಬೇಗನೆ ಎದ್ದು
ಹೋಗಬೇಕು ಬರಿ ಹೊಟ್ಟೇಲಿ
ಆಗಿದೆಯೆಂತೆ ರಾಡಿ''

ಮಗಳು ಅಂದ್ಲು ಕಿಲಕಿಲನಗ್ತಾ
ಡಾಕ್ಟರ್ ಮಾತು ಕೇಳಿ ಹೋಗಬೇಡಿ ನೀವು
ಹಾಗೇ ಬರೀ ಹೊಟ್ಟೇಲಿ
ಬನಿಯನ್ ಆದ್ರೂ ಹಾಕ್ಕೊಂಡು ಹೋಗಿ
ರಸ್ತೇಲ್ಲಾನ ಉಳೀಲಿ.

(ಕೃಪೆ - ಆಕಾಶವಾಣಿ)


ನೀವು ಒಂದೇ ಕಿವಿಗೆ ರಿಂಗ್
ಹಾಕ್ಕೊಂಡಿದೀರಲ್ಲಾ
ಅದಕ್ಕೇನಾದ್ರೂ ವಿಶೇಷ ಅರ್ಥ ಇದೆಯೇನು?
ಇದೆ. ಇನ್ನೊಂದ್ ರಿಂಗ್ ಕಳೆದುಹೋಗಿದೆ ಅಂತ!

ಮ್ಯಾಡ್ ಕೃಪೆ

ಒಂದು ಅಪೂರ್ವ ಹಾಡು ಮತ್ತು ಅದರ ಹಿನ್ನೆಲೆ

ಕೇಫ

ಎಲ್ಲಿ ನನ್ನ ಕುದುರಿ ಹೋಯ್ತು
ಯೆಂಕೂಬಾಯಿ ಹುಡುಕೆಲೇ ॥ಪಲ್ಲವಿ॥

ಮುದ್ದು ನನ್ನ ಕುದುರಿಗದರ
ಮಾರಿಯಲ್ಲಿ ನಾಮವಿತ್ತೂ ॥ಅನುಪಲ್ಲವಿ॥

ಸುಲ್ತಾನ್ ಸಾಯೇಬು ಕೊಟ್ಟಕುದುರಿ
ಮುಲ್ತಾನ್ ದೇಶದಿ ಬಂದುದೂ ।
ಇತ್ತಲಿದ್ದುದು ಎತ್ತ ಹೋಯ್ತು ?
ಸುತ್ತ ಮುತ್ತ ಹುಡುಕೆಲೇ ॥1॥ಎಲ್ಲಿ॥

ಒಂದು ಕಣ್ಣು ಥೋಡೆ ಕುರುಡು
ಒಂದು ಕಾಲು ಕುಂಟಲೇ ।
ಕಿವಿಯು ಬಾಲ ಕೊಯ್ದುದುದರ
ಛವಿಯನೇ ನೆಂಬೆನಹಾ! ॥2॥ಎಲ್ಲಿ॥

ಸಭೆಸಭೆಗೂ ಹೋದ ಕುದುರಿ
ಸಕಲರಿಗೂ ತಿಳಿದುದೂ ।
ಒಂದು ಹೆಜ್ಜೆ ಮುಂದಕ್ಕಿಟ್ಟರೆ
ಹಿಂದಕ್ಕೆರಡು ಇಡುವುದಲ್ಲೆ ॥3॥ಎಲ್ಲಿ॥

ಶಿಷ್ಯರ ನೋಡಿ ನಿಲುವ ಕುದುರಿ
ಪುಷ್ಯದಲ್ಲಿ ಹೋಯ್ತಲೇ ।
ಸೀರಿ ಹೊಸದು ಕೊಡುವೆನಲ್ಲೇ
ಹಾರಿ ಹಾರಿ ಹುಡುಕೆಲೇ ॥4॥ಎಲ್ಲಿ॥

ನರಷಿಯ್ಯ ಶೀನ ಕೃಷ್ಣರನ್ನು
ಕರಸಿಕೇಳೇ ಶಿಷ್ಯರಾ ।
ತಾಯಗಂಡರು ಯಾರೋ ಸೇರಿ
ಮಾಯಮಾಡಿ ಇರುವರಲ್ಲೇ ॥5॥ಎಲ್ಲಿ॥

ಅಪ್ಪಂಭಟ್ಟ ಅಣ್ಣಶಾಸ್ತ್ರಿ
ಕುಪ್ಪಣ್ಣಯ್ಯಂಗಾರ್ಯರ
ಎಲ್ಲರಿಗದರ ಮೇಲೆ ಕಣ್ಣು
ಬಲ್ಲ ವಿಠಲದೇವನೂ ॥6॥ಎಲ್ಲಿ॥

ಈ ಹಾಡನ್ನು ರಚಿಸಿದವರು ದಿ॥ ಕೆ.ಎ. ಕೃಷ್ಣಸ್ವಾಮಿ ಐಯ್ಯರ್ ಅವರು. 1920- 1930 ದಶಕದಲ್ಲಿ ಅವರು ತುಮಕೂರಿನ ಸರ್ಕಾರಿ ಹೆಸ್ಕೂಲ್ ಮುಖ್ಯೋಪಾಧ್ಯಾಯರಾಗಿದ್ದರು. ಹಾಗೂ ತುಮಕೂರಿನಲ್ಲಿದ್ದ ನಮ್ಮ ಕುಟುಂಬಕ್ಕೆ ಹತ್ತಿರವಾಗಿದ್ದು ಮುಂದೆ ಸಂಬಂಧಿಗಳೂ ಆದರು. ಶ್ರೀ ಕೃಷ್ಣಸ್ವಾಮಿ ಐಯ್ಯರ್ ಒಳ್ಳೆಯ ಸಂಗೀತಜ್ಞರೂ ಪಿಟೀಲ್ ವಾದಕರೂ ಆಗಿದ್ದರು. ಅವರ ಬಗ್ಗೆ ದಿ॥ ಡಿ.ವಿ. ಗುಂಡಪ್ಪನವರು ತಮ್ಮ 'ನೆನಪಿನ ಅಂಗಳ' ಲೇಖನ ಮಾಲೆಯಲ್ಲಿ ಕೂಡ ಪ್ರಶಂಸೆಯ ಮಾತುಗಳನ್ನು ಬರೆದಿದ್ದಾರೆ.

ಒಮ್ಮೆ ಐಯ್ಯರ್ ಅವರು ತಮ್ಮ ಕುಟುಂಬ ಹಾಗೂ ನೆಂಟರಿಷ್ಟರೊಡನೆ ತುಮಕೂರಿಗೆ ಸಮೀಪದಲ್ಲಿರುವ ದೇವರಾಯನ ದುರ್ಗಕ್ಕೆ ದೇವರ ದರ್ಶನಕ್ಕೆ ಹೋಗಿದ್ದಾಗ ಅಲ್ಲಿ ಆಗ ಅಧಿಕಾರದಲ್ಲಿದ್ದ ಸ್ವಾಮಿಗಳು ಐಯ್ಯರ್ ಮತ್ತು ಸಂಗಡಿಗರಿಗೆ ತೀರ್ಥಪ್ರಸಾದ ಕೊಡಲು ನಿರಾಕರಿಸಿಬಿಟ್ಟರು. ಕಾರಣ - ದೇವರಾಯದುರ್ಗವು ಕಟ್ಟಾ ಸಾಂಪ್ರದಾಯ ಮಾಧ್ವ ಮಠವಾಗಿದ್ದುದರಿಂದ ಅಲ್ಲಿ ಮಾಧ್ವರೇತರರಿಗೆ ತೀರ್ಥಪ್ರಸಾದ ವಿನಿಯೋಗವಿರಲಿಲ್ಲವಂತೆ. ಇದರಿಂದ ಕೃಷ್ಣಸ್ವಾಮಿ ಐಯ್ಯರ್ ಅವರಿಗೆ ನಿರಾಶೆಯೊಡನೆ ಅವಮಾನವೂ ಆಗಿತ್ತು.

ಆ ದಿನಗಳಲ್ಲಿ ಮುರ್ಗಾದ ದೇವಸ್ಥಾನದಲ್ಲಿದ್ದ ಸ್ವಾಮಿಗಳ ಬಗ್ಗೆ ಕೆಲವು ಆರೋಪಗಳೂ ವದಂತಿಗಳೂ ಇದ್ದುದರಿಂದ ಐಯ್ಯರ್ ಅವರು ಅವರ ಬಗ್ಗೆ ಈ ಹಾಡನ್ನು ರಚಿಸಿದ್ದರು. ನನ್ನ ಚಿಕ್ಕಪ್ಪ ರಾಮಸ್ವಾಮಿ ಐಯ್ಯರ್ ಅವರ ಶಿಷ್ಯರಾಗಿದ್ದು ಅವರ ಪುಸ್ತಕದಲ್ಲಿ ಈ ಹಾಡು ಬರೆಯಲಾಗಿದ್ದು ನಾವೆಲ್ಲರೂ ಕಲ್ತಿದ್ದೆವು. ನಾನು ಬೆಂಗಳೂರಿನಲ್ಲಿಯೂ ಇತ್ತೀಚೆಗೆ ಮದ್ರಾಸಿನಲ್ಲೂ ಕೇಳಿದ್ದೇನೆ. ಪೂರ್ತಿ ಯಾರೂ ಹಾಡಿಲ್ಲ. ಆ ಕಾರಣಕ್ಕಾಗಿ ''ಅಪರಂಜಿ'' ಓದುಗರಿಗೆ ಈ ಅಪೂರ್ವ ರಚನೆ ಮತ್ತು ನನಗೆ ಅಧಿಕೃತ ತಿಳಿದಿರುವ ಹಾಗೆ ಬರೆದಿದ್ದೇನೆ.



''ಬ್ಯೂಟಿ ಈಸ್ ಓನ್ಲಿ ಸ್ಕಿನ್ ಡೀಪ್'' ಅಂದ್ರೆ ಅರ್ಥ ಏನಮ್ಮಾ?

ನೊರೆ ನೊರೆ ಡಯಲಾಗ್ಸು

ಎಚ್. ಗೋಪಾಲಕೃಷ್ಣ

'ಹಾಗೆ ನೋಡಿದರೆ ಮನುಷ್ಯನೋಡಿ ದೇವರಿಗಿಂತಲೂ ಇಂಟಲಿಜೆಂಟು...' ಅಂತ ಸೂರಿ ಹೇಳಿದ.

ಸಂಜೆ ಕ್ಲಬ್‌ನಲ್ಲಿ ಗೆಳೆಯರು ಸೇರಿದ್ದರು. ರಮ್ಮಿ ಮುಗಿದು ಮನೆಗೆ ಹೊರಡುವ ಮುನ್ನ ಗಂಟಲು ಆರಿಸಿಕೊಳ್ಳಲು ಟೇಬಲ್ಲಿನ ಸುತ್ತಲೂ ಗೆಳೆಯರು ಕೂತಿದ್ದರು. ಇದುರಿಗೆ ನೊರೆ ನೊರೆ ಆಡುತ್ತಿರುವ ತಂಪು ಪಾನೀಯ ಇತ್ತು. ಹೊರಗಡೆ ತುಂತುರು ಹನಿ ಬೀಳುತ್ತಿದ್ದರೂ ಒಳಗಡೆ ಒಂದು ರೀತಿ ಸೆಖೆ; ಹೊಟ್ಟೆಯಲ್ಲೊಂದು ರೀತಿ ಸಂಕಟ.

ಸ್ವಲ್ಪ ನನ್ನನ್ನ ಡ್ರಾಪ್ ಮಾಡ್ತೀಯಾ?... ಅಂತ ಚಂದ್ರಿ ನನ್ನ ಮನೆಯ ಹತ್ತಿರವೇ 'ಪಾಸ್' ಆಗಬೇಕಿದ್ದ ಗೋಪಾಲಿನ ಕೋರಿಕೊಂಡ.

ಯಾಕೋ ನಿನ್ನ ವೆಹಿಕಲ್ ಏನಾಯಿತು? ಅಂತ ಶಾಮಿ ಚಂದ್ರೀನ ಕೇಳಿದ.

ಸ್ಟೇರಿಂಗ್ ವೀಲ್ ಅದೇನೋ ಸರಿಯಾಗಿ ತಿರುಗ್ತಿಲ್ಲ. ಅದರ ಜೊತೆಗೆ ಸೈಡ್ ಡೋರ್‌ನ ಲ್ಯಾಚ್ ಜಾಮ್ ಆಗಿದೆ. ಗ್ಯಾರೇಜಿಗೆ ಬಿಟ್ಟರೆ ಅದು ಹೋಗಿದೆ ಇದು ಹೋಗಿದೆ ಬೇರೆ ತಂದು ಹಾಕಬೇಕು ಅಂತ ಹೇಳ್ತಿದಾನೆ.

ಅದಕ್ಕೇ ಹಳೇಗಾಡಿ ತಗೋಬಾರದು ಅನ್ನೋದು ಅಂತ ಕಿಟ್ಟಿ ತಾನು ಹೊಸಾ ಗಾಡೀನ ಕೊಂಡುಕೊಂಡಿದ್ದನ್ನು ಸಮರ್ಥಿಸಿಕೊಂಡ,.

ಹೊಸ ವೆಹಿಕಲ್‌ಗಳಲ್ಲಿ ಅದೇನೂ ಪ್ರಾಬ್ಲಂ ಬರೊಲ್ಲ ಅಂತ ಅಂದ್ಕೋಬೇಡ... ಚಂದ್ರಿಕಣ್ಣು ಕೆಂಪಗಾಗಿತ್ತು. ನನ್ನ ಕಸಿನ್ನು ಷೋರೂಂ ನಿಂದಲೇ ಮಾರುತಿ ಎಯ್ಟ್‌ಹಂಡ್ರಡ್ ತಂದಿದ್ದು. ಎರಡು ದಿವಸ ಓಡಿ ಮೂರನೆ ದಿವಸವೇ ನಿಂತೇ ಹೋಯಿತು. ಅದ್ಯಾಗೆ ನಿಂತು ಹೋಗಿದೆ ಅಂತ ಗ್ಯಾರೆಜಿನವರಿಗೇ ಅರ್ಥ ಆಗದೇ ಅಲ್ಲಿಂದಲೇ ಮೆಕ್ಯಾನಿಕ್ ಕರೆಸಿದರು ಗೊತ್ತೇನು?

ಶಾಮಿ ನಕ್ಕ 'ಇದೆಲ್ಲಾ ವೆಹಿಕಲ್ ಮ್ಯಾನುಫ್ಯಾಕ್ಚರರ್ಸ್‌ಗಳದ್ದೇ ಕಿತಾಪತಿಗಳು ಕಣಯ್ಯ. ವೆಹಿಕಲ್ ತಯಾರಿಸಿದಾಗಲೇ ಅದು ಐದುವರ್ಷ ಹತ್ತುವರ್ಷ ತೊಂದರೆ ಇಲ್ಲದೇ ನಡೆದುಬಿಟ್ಟರೆ ಮುಂದೆ ತಮ್ಮ ಗತಿ ಏನು ಅಂತ ಅವರು ಲೆಕ್ಕ ಹಾಕ್ತಿರ್ತಾರೆ. ಅದಕ್ಕೆ ಯಾವುದೂ ಜಾಸ್ತಿ ಬಾಳಿಕೆ ಬರಬಾರದು ಆ ರೀತಿ ಅವರ ಆರ್ ಅಂಡ್ ಡಿ ಪ್ಲಾನ್ ಹಾಕುತ್ತೆ. ಅದಕ್ಕೆ ಇರಬೇಕು ನೋಡೋ ಯಾರೂ ಈ ಫೋರ್ ವೀಲರ್‌ಗಳನ್ನ ಪರ್ಮನೆಂಟಾಗಿ ಇಟ್ಕೊಕೊಳ್ಳೊದೇ ಇಲ್ಲ. ಎರಡು ವರ್ಷ ಮೂರು ವರ್ಷಗಳ

ಕೈಬಿಟ್ಟಾಯಿಸ್ತಲೆ ಇರ್ತಾರೆ.

ಅದೇ ಸರಿಯಾದ್ದು ಅನ್ನು. ಈಗ ಇಲ್ಲಿನೋಡು ಈ ನನ್ನ ರಿಸ್ಟ್‌ವಾಚು ಎಚ್.ಎಂ.ಟಿ.ಯದು ತಗೊಂಡು ಆಗಲೇ ಹದಿನೆಂಟು ವರ್ಷ ಆಯಿತು. ಇನ್ನೂ ಒಂದು ಸಲವೂ ರಿಪೇರಿಗೆ ಬಂದಿಲ್ಲ. ಒಬ್ಬೊಬ್ಬ ತಗೊಂಡಂತಹ ಈ ರೀತಿ ಐಟಂಗಳು ಹತ್ತು ಇಪ್ಪತ್ತು ವರ್ಷ ರಿಪೇರಿಗೆ ಬರದೇ ಬಾಳಿಕೆ ಬಂದರೆ ಏನುಗತಿ?

ಏನುಗತೀನೇ? ಕಸ್ಟಮರ್ ಸ್ಯಾಟಿಸ್ ಫ್ಯಾಕ್ಷನ್ ಸಿಗ್ತಲ್ಲಯ್ಯಾ. ಎಲ್ರೂ ಅದಕ್ಕೆ ತಿರುಗಿ ಬರ್ತಾರೆ.

ತಿರುಗಿ ಬರ್ತಾರೆ? ಯಾರು ತಿರುಗಿ ಬರ್ತಾರೋ? ನೀನು ವಾಚ್ ತಗೊಂಡ ಮೇಲೆ ಮತ್ತೆ ಎಚ್.ಎಂ.ಟಿ. ಷೋರೂಂ ಕಡೆ ತಿರುಗಾದರೂ ನೋಡಿದೀಯಾ?

'ಇಲ್ಲ...' ಅಂತ ತಲೆ ಆಡಿಸಿದ ಶಾಮಿ.

'ಅದಕ್ಕೇ ಎಚ್.ಎಂ.ಟಿ. ಮುಚ್ಚೋ ಗತಿ ಬಂದಿರೋದು. ನಾವು ತಯಾರಿಸೋ ಪ್ರಾಡಕ್ಟು ಎರಡೇ ತಿಂಗಳಿಗೆ ರಿಪೇರಿಗೆ ಬರಬೇಕು. ಕನ್ಸ್ಯೂಮರ್ ರಿಪೇರಿ ಮಾಡಿಸಿ ಮಾಡಿಸಿ ಸುಸ್ತು ಹೊಡೆದು ಅದನ್ನು ಪಕ್ಕದ ಮನೆ ತೊಟ್ಟಿಗೆ ಎಸೆದು ಬೇರೆ ತಗೋಬೇಕು ಆಗಲೇ ಪ್ರಾಡಕ್ಟ್ ಮೂವ್ ಆಗೋದು.

ಈ ಚರ್ಚೆ ನಡೀಬೇಕಾದರೇನೇ ನೆನ್ನೆ ತಾನೇ ಆಸ್ಪತ್ರೇಲಿ ಥರೋ ಚೆಕ್‌ಅಪ್ ಮಾಡಿಸಿಕೊಂಡಿ ಬಂದಿದ್ದ ಸೂರಿ ಹೇಳಿದ ''ಹಾಗೆ ನೋಡಿದರೆ ಮನುಷ್ಯನೇ ದೇವರಿಗಿಂತಲೂ ಇಂಟಲಿಜೆಂಟು...'' ಅಂತ.

ನೊರೆನೊರೆ ಪಾನೀಯ ಅದೇನು ಅಷ್ಟೊಂದು 'ಕಿಕ್' ಕೊಡೋ ಅಂತಹದ್ದಲ್ಲ. ಆರುಲೀಟರು ಈ ಪಾನೀಯವನ್ನು ಹೊಟ್ಟೆಗೆ ಸುರಿದು ತಂತಿಮೇಲೆ ನಡೀಯೋ ಅಂತಹ ಜನ ಇದಾರೆ ನಮ್ಮ ಪಟಾಲಂನಲ್ಲೇ. ಅಂತಹದರಲ್ಲಿ ಬರೀ ಎರಡೇ ಸಿಪ್ಗೆ ಔಟ್ ಆಫ್ ದಿ ಟ್ರ್ಯಾಕ್ ಮಾತಾಡ್ತಿದಾನಲ್ಲಾ ಈ ಸೂರಿ ಅಂತ ಕೊಂಚ ದಿಗಿಲಾಯಿತು ಗೆಳೆಯರಿಗೆ.

ಅಲ್ವೋ ಸೂರೀ ಎರಡೇ ಸಿಪ್‌ಗೆ ಕಿಕ್ ಹೊಡೀತೆನೋ? ಅಂತ ಶಾಮಿ ಕಣ್ಣು ಕಣ್ಣು ಬಿಟ್ಟು ಕೇಳಿದ.

ಸೂರಿ ಮೂರನೆ ಸಿಪ್ ಹೀರುತ್ತಿದ್ದವನು ಇಲ್ಲ ಅಂತ ತಲೆ ಆಡಿಸಿದ.

ಔಟ್ ಆಫ್ ಟಾಪಿಕ್ಕು ಮತ್ತು ಇರ್ರಿಲೆವೆಂಟ್ ಮಾತು ಹೇಳಿದ ಸೂರಿ. 'ಕಿಕ್' ಹತ್ತಿಲ್ಲ ಅಂದ್ರ ನಂಬೋದು ಹೇಗೆ? ಎಲ್ಲಿ? ಪಲ್ಲವರು ಅಂತ ಹೇಳು.... ಚಂದ್ರ.

'ಪಲ್ಲವರು...' ಅಂತ ರಿಪೀಟಿಸಿದ ಸೂರಿ

ಕದಂಬ ವೃಕ್ಷ ಆಟೋರಿಕ್ಷಾ ಅಂತ ಹೇಳು

ಆದೂ ಸಹ ಸೂರಿ ಬಾಯಿಂದ ಸರಿಯಾಗೇ ಹೊರಟಿತು.

ಸಿಪ್ಪುಗಳನ್ನು ಸಿಪ್ಪಿಸಿದಾಗ ಕಂಟ್ರೋಲ್‌ನಲ್ಲಿದ್ದಾನೋ ಇಲ್ಲವೋ ಎಂದು ತಿಳಿಯಲು ಗೆಳೆಯರು ಆಗಾಗ್ಗೆ ಈ ಪ್ರಯೋಗ ನಡೆಸುವ ರೂಢಿ ಇಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ 'ಪಲ್ಲವರು' ಎಂಬ ಪದವನ್ನು ಮೂರು ಪೆಗ್ಗಿನ ನಂತರವೂ ಸರಿಯಾಗಿ ಹೇಳಿದ ಅಂದರೆ ಅಂತಹವನು 'ಎ' ಗ್ರೇಡ್ ಸಿಪ್ಪರ್ ಅಂತೆ!

'ಅದೇನು ದೇವರ ವಿಷಯ ಹೇಳ್ತಿದ್ದೆಯಲ್ಲಾ?' ಶಾಮಿ ಕೇಳಿದ.

'ಅದೇ ದೇವರಿಗೆ ಐಕ್ಯು ಕಡಿಮೆ ವೆನ್ ಕಂಪೇರಡ್ ಟು ಮ್ಯಾನ್...' ಅಂತ ಸೂರಿ ವಿವರಿಸಿದ.

'ಇದ್ಯಾವುದಯ್ಯಾ ಹೊಸಾ ಥಿಯರಿ? ಭಗವಂತನ್ನ ನಾವು ನಮ್ಮ ಹಿಂದಿನವರು ನಮ್ಮ ಪುರಾತನ ಎಲ್ಲರೂ ದಿಬೆಸ್ಟ್ ಬ್ರೈನ್ ಅಂತ ಹೇಳಬೇಕಾದರೆ ನಿಂದೇನೋ ನ್ಯೂಥಿಯರಿ?' ಅಂದ ಚಂದ್ರಿ ಕೆಣಕಿ.

ಸೂರಿ ಮತ್ತೊಂದು ಸಿಪ್ ಹೀರಿದ 'ನೋಡಮ್ಮಾ ನಾವು ಹುಲುಮಾನವರು ಎಂತಹ ಮುಂಜಾಗರೂಗತೆ ವಹಿಸ್ತೀವಿ ಅಂದರೆ ಟೂ ವೀಲರ್‌ಗೆ ಒಂದು ಸ್ಪೇರ್ ಸ್ಟೆಪ್ನಿ ಇಡ್ತೀವಿ; ಯಾವುದೇ ವೆಹಿಕಲ್ ತಯಾರಿಸಿದರೂ ಅದಕ್ಕೆ ಸ್ಪೇರ್ ಪಾರ್ಟ್‌ನೂ ಸಹ ಫೈನಲ್ ಪ್ರಾಡಕ್ಸ್ ಅಸೆಂಬಲ್ ಮಾಡೋಕ್ಕೆ ಮೊದಲೇ ರೆಡಿ ಮಾಡಿ ಇಟ್ಟಿರ್ತೀವಿ. ಅಂದರೆ ನಮಗೆ ಎಂಥಹಾ ಫೋರ್‌ಸೈಟು ಫೋರ್‌ಥಾಟ್ಸು ಇವೆ ಗೊತ್ತಾ?.....'

ಶ್ರೋತೃಗಣ ತಲೆ ಆಡಿಸಿತು

ಆದರೆ ಅದೇ ದೇವರು ನೋಡ್ರಯ್ಯಾ ಒಬ್ಬ ಮನುಷ್ಯನಿಗೆ ಒಂದೇ ಹೃದಯ, ಎರಡು ಕಣ್ಣು ಒಂದು ಜೊತೆ ಕೈ, ಕಾಲು ಹೀಗೆ ಎಲ್ಲಾ ಲಿಮಿಟೆಡ್ಡು. ಅಲ್ಲಾ ಇವೆಲ್ಲಾ ಆಗಾಗ ಹಾಳಾಗೋದು ಅಂತ ಗೊತ್ತಿದ್ದೂ ಗೊತ್ತಿದ್ದೂ ಇವುಗಳದ್ದೇ ಒಂದೊಂದು ಜೊತೆ ಸ್ಪೇರುಗಳನ್ನ ದೇಹದಲ್ಲೇ ಅಳವಡಿಸಿದ್ದರೆ ಅವನ ಗಂಟೇನು ಹೋಗ್ತಿತ್ತು? ಒಂದು ಹೃದಯ ಕೆಟ್ಟು ಅಂದ ಕೂಡಲೇ ಮತ್ತೊಂದನ್ನು ತೆಗೆದು ಜೋಡಿಸಬಹುದಿತ್ತು ಅಲ್ಲವೇ?....' ಸೂರಿ ಲಾಜಿಕ್ಕೂ ಹೀಗೇ ನೂರೆನೂರೆ ಟಂಬ್ಲರು ಖಾಲಿ ಆಗುವವರೆಗೂ ಸಿಪ್ಪುಗಳ ನಡುನಡುವೆ ಮುಂದುವರೀತು.

ಹೌದಲ್ಲವೇ ಜಗತ್ತನ್ನೇ ನಡೆಸುವ ಆ ಜಗನ್ನಿಯಾಮಕನಿಗೆ ಈ ಫ್ಲೋರ್‌ಥಾಟ್ಸ್ ಹೇಗೆ ಮತ್ತು ಯಾಕೆ ಬರಲಿಲ್ಲ? ದೇವರನ್ನು ಕಾಣಬಹುದಾದ ಯಾವುದಾದರೂ ನರಾಧಮ ಆ ದೇವರ ತಲೆಯಲ್ಲಿ ಈ ವಿಚಾರಧಾರೆ ತುಂಬಿ ಎಲ್ಲರಿಗೂ ಸ್ಪೇರ್

ಪಾರ್ಟ್ಸ್ ಅಂಗಗಳು ದೊರೆವ ಹಾಗಿದ್ದರೆ... ಕರ್ನಾಟಕದ ಎಲ್ಲಾ ಮೆಡಿಕಲ್ ಕಾಲೇಜುಗಳ, ಡಾಕ್ಟರುಗಳೂ ಲಾಟರಿ ಟಿಕೇಟ್ಟು ಮಾರಿ ಜೀವಿಸಬೇಕಾಗುತ್ತೇನೋ! ಹ್ಯೂಮನ್‌ಸ್ಪೇರು ಪಾರ್ಟ್ ಅಂತ ಅಂಗಡಿಗಳನ್ನೂ ತೆರೆದು ಧಂಧ ನಡೆಸಬೇಕಾಗುತ್ತೇನೋ..... ಅಂಥಹ ಕಾಲವೂ ಬರಬಹುದೇ?...



''ದಿನ ಬೆಳಗಾದ್ರೆ ಬೇಜಾರು, ಸುಸ್ತು ಅಂದ್ರಾ. ಹಾಗಾದ್ರೆ ನಿಮಗೇನೂ ಆಗಿಲ್ಲಾರೀ.
ದೇಶದ ಸ್ಥಿತೀಲಿ ಇವೆಲ್ಲಾ ನ್ಯಾಚುರಲ್ ರಿಯಾಕ್ಷನ್ ಅಷ್ಟೇ''



ನೀನು ಹಾಡು ಹೇಳ್ದೆ ಇದ್ರೆ ಮದ್ವೆ ಮಾಡ್ಕೊತೀನಿ ಅಂತಾನಮ್ಮ!

ಟೈ ಪ್ರಕರಣಗಳು

ಎಂ.ಎಸ್.ಕೆ.

50 ವರುಷಗಳ ಹಿಂದಿನ ಮಾತು. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಕನ್ನಡ ಮತ್ತು ಸಂಸ್ಕೃತ ಪಂಡಿತರನ್ನು ಬಿಟ್ಟು ಮತ್ತೆಲ್ಲರೂ ಸ್ಕೂಲಿಗೆ ಸೂಟು, ಟೈ ಇಲ್ಲದೇ ಬರುತ್ತಿರಲಿಲ್ಲ. ಆಗ ಅವರ ಸಂಬಳ ತಿಂಗಳಿಗೆ 50 ರೂಪಾಯಿಗಳು. ಮೇಲೆ ಭತ್ಯ ಹನ್ನೆರಡೂವರೆ ರೂಪಾಯಿ. ಇದರಲ್ಲೇ ಅವರೆಲ್ಲಾ ಸೂಟು-ಟೈ ಮ್ಯಾನೇಜ್ ಮಾಡುತ್ತಿದ್ದರು.

ನಮ್ಮ ಒಬ್ಬ ಮಾಸ್ಟರು ಮಾತ್ರ ಟೈ ಕಟ್ಟುತ್ತಿರಲಿಲ್ಲ. ನಾವೆಲ್ಲಾ ಪುಡಿಕಾಸು ಹಾಕಿ ಅವರಿಗೆ ಒಂದು ಟೈ ಕೊಂಡುಕೊಟ್ಟೆವು. ಅವರು ಅದನ್ನು ಸ್ವೀಕರಿಸಿ ಮುಂದಿನ ದಿನ ಅದನ್ನು ಧರಿಸಿ ಶಾಲೆಗೆ ಬಂದು ನಮ್ಮನ್ನು ಉದ್ದೇಶಿಸಿ ''ನನಗೆ ಟೈ ಕೊಟ್ಟಿದ್ದಕ್ಕೆ ಥ್ಯಾಂಕ್ಸ್. ಆದರೆ ನನ್ನ ಮದುವೇಲಿ ನನ್ನ ಮಾವ ಕೊಟ್ಟಿದ್ದ ಒಂದು ಟೈ ಮನೇಲಿ ಹಾಗೇ ಇದೆ. ಈ ಟೈ ಕ್ರಿಶ್ಚಿಯನ್ ಜನರು ತಮ್ಮ ಧರ್ಮ ಶ್ರದ್ಧೆಗಾಗಿ ಧರಿಸುವ ಸಂಕೇತ. ಕುತ್ತಿಗೆಯ ಹತ್ತಿರ ಕ್ರಾಸ್ ಚಿನ್ಹೆ ಬರುತ್ತೆ. ಅದಕ್ಕೇ ಅವರು ಅದನ್ನು ಶ್ರದ್ಧೆಯಿಂದ ಧರಿಸುತ್ತಾರೆ. ನಾವೂ ಹಾಗೇ ಮಾಡಬೇಕೆಂಬ ನಿಯಮವೇನಿಲ್ಲ'' ಎಂದು ನಮಗೆ ಟೈ ಕಟ್ಟುವ ಕಾರಣವನ್ನು ತಿಳಿಹೇಳಿದರು. ಮುಂದಿನ ದಿನದಿಂದ ನಾವು ಕೊಟ್ಟ ಟೈ ಅವರ ಮಾವನವರು ಕೊಟ್ಟ ಟೈ ಜೊತೆ ನಿದ್ದೆ ಮಾಡಿತು.

ನನ್ನ ಪರಿಚಯಸ್ಥರಿಬ್ಬರು ತಮ್ಮ ವಠಾರದ ಆಜೂ ಬಾಜೂ ತಾವು ಕೆಲಸ ಮಾಡುವ ಆಫೀಸಿನಲ್ಲಿ ದೊಡ್ಡ ಆಫೀಸರ್ ಎಂದು ಹೇಳಿಕೊಂಡಿದ್ದರು. ಆಫೀಸರ್ ಆದಮೇಲೆ ಟೈ ಕಟ್ಟಲೇಬೇಕಲ್ಲವೆ. ಹಾಗೇ ಬರಿ ಕೊರಳಿನಲ್ಲಿ ಸಾಧಾರಣ ಗುಮಾಸ್ತನಂತೆ ಹೋಗಲು ಸಾಧ್ಯವೇ. ಆದರೆ ಇಲ್ಲೆ ಒಂದು ತೊಡಕಿತ್ತು. ಆ ಆಫೀಸಿನಲ್ಲಿ ಬೇರೆಲ್ಲರೂ ಟೈ ರಹಿತವಾಗಿ ಬರುತ್ತಿದ್ದರು. ಅದೊಂದು ಸಿಂಪಲ್ ವಾತಾವರಣ. ಅಲ್ಲಿ ಇವರೊಬ್ಬರೇ ಹೇಗೆ ಟೈ ಕಟ್ಟಿ ಹೋಗಿ ಕುಳಿತುಕೊಳ್ಳುವುದು? ಟೈ ಇಲ್ಲದೇ ಹೋದರೆ ನೆರೆಹೊರೆ ಏನನ್ನುತ್ತಾರೆ? ಇದನ್ನು ಚೆನ್ನಾಗಿ ಯೋಚಿಸಿಯೇ ಅವರು ಒಂದು ಉಪಾಯ ಸಂಯೋಜಿಸಿದರು. ಮನೆ ಬಿಡುವಾಗ ಟೈ ಕಟ್ಟಿ ಧೀಮಾಕಾಗಿ ಸುತ್ತ ಮುತ್ತ ನೋಡುತ್ತಾ ಹೊರಡುವುದು. ಅರ್ಧ ದಾರೀಲಿ ಆ ಟೈ ಬಿಚ್ಚಿ ಜೇಬಲ್ಲಿಟ್ಟು ಆಫೀಸಿಗೆ ಹೋಗುವುದು. ಮನೇಗೆ ವಾಪಸ್ ಬರುವಾಗ ಮತ್ತೆ ಟೈ ಧಾರಣೆ. ಈ ನಾಟಕ ಸುಮಾರು ದಿನ ನಡೆಯಿತು. ಕೊನೆಗೆ ಅವರಿಗೇ ಬೇಜಾರಾಗಿ ತಮ್ಮ ನಾಟಕವನ್ನು ನಿಲ್ಲಿಸಿದರು.

ನನಗೆ ಪರಿಚಯವಿದ್ದ ಆ ಕಾಲದ ಇನ್ನೊಬ್ಬ ಹಿರಿಯರಿದ್ದರು. ತುಂಬಾ ಮಡೀ ಮನುಷ್ಯ. ಅವರು ಮನೆಲಿದ್ದಾಗ ಮೈಲಿಗೇಲಿ ಇದ್ದದ್ದು ನಾನು ನೋಡೇ ಇಲ್ಲ. ಸದಾಕಾಲ ಮಡಿ ಪಂಚೆ ಉಟ್ಟು ದೇವರ ಪೂಜೆ, ಪುನಸ್ಕಾರ, ಧ್ಯಾನ ಇತ್ಯಾದಿಗಳಲ್ಲಿ

ತೊಡಗಿರುತ್ತಿದ್ದರು. ಅವರ ಉದ್ಯೋಗ ಲೇವಾದೇವಿ. ಚಿಕ್ಕ ಪುಟ್ಟ ಹಣವನ್ನು ಬಡ್ಡಿ, ಚಕ್ರಬಡ್ಡಿಗೆ ಸಾಲ ಕೊಡುತ್ತಿದ್ದರು. ಅವರಿಂದ ಎರವಲು ಪಡೆದು ಬಹುಮಂದಿ ಅದನ್ನು ವಾಪಸ್ ಕೊಡುತ್ತಿರಲಿಲ್ಲ. ಹೀಗಾಗಿ ಈ ಮಹಾಶಯರು ಕೋರ್ಟ್ ಹತ್ತಬೇಕಾಗುತ್ತಿತ್ತು. ಅವರಿಗೆ ಲಾಯರ್‌ಗಳ ಮೇಲೆ ಭರವಸೆ ಇರಲಿಲ್ಲ. ಲಾಯರ್ಗಳಿಗೂ ಇವರ ಮೆಲೆ ಭರವಸೆ ಇರಲಿಲ್ಲ. ಏಕೆಂದರೆ ಇವರು ಎಂದೂ ಯಾವ ಲಾಯರ್ಗೂ ಒಂದು ಪುಡಿಕಾಸೂ ಫೀ ಕೊಟ್ಟಿರಲಿಲ್ಲ. ಇದೊಂದು ತರಹ ಮ್ಯೂಚುಅಲ್ ಭರವಸೆ ಲಾಸ್ ಸಿಟುಏಶನ್.

ಈ ಮಹಾಶಯರು ಅಂದಿನ ಎಫ್.ಏ. ಪಾಸ್ ಮಾಡಿದ್ದರು. ಸಾಕಷ್ಟು ಇಂಗ್ಲೀಷ್ ಪರಿಶ್ರಮ ಇತ್ತು. ತಮ್ಮ ಕೇಸ್ ತಾವೇ ಆರ್ಗ್ಯೂ ಮಾಡುವ ಆತ್ಮ ವಿಶ್ವಾಸ ತುಂಬಿತ್ತು. ತಾವು ಟ್ರಿಂ ಆಗಿ ಟೈ-ಕೋಟು ಧರಿಸಿ, ಪೇಟಾ ತೊಟ್ಟು ಜಡ್ಜ್ ಮುಂದೆ ನಿಂತರೆ ಕೇಸ್ ಖಂಡಿತ ತಮ್ಮ ಕಡೇ ಆಗೇ ಆಗುತ್ತೆ ಎಂಬ ನಂಬಿಕೆ ತುಂಬಿ ತುಳುಕುತ್ತಿತ್ತು. ಅವರು ದೇವರ ಪೂಜೆ ಮುಗಿಸಿ "ಕೋರ್ಟ್ ಇಂದ ವಾಪಸ್ ಬಂದಮೇಲೆ ನೈವೇದ್ಯ ಮಾಡ್ತೀನಿ" ಅಂತ ಕೂಗಿ ಹೇಳಿ, ಸೈಕಲ್ ಕಚ್ಚೆ ಕಟ್ಟಿ, ಕೋಟು-ಟೈ ಧರಿಸಿ ರುಮಾಲು ತೊಟ್ಟು ಸೈಕಲ್ ಈಚೆಗೆ ತೆಗೆಯುತ್ತಿದ್ದರು. ಅವರು ಸೈಕಲ್ ಹತ್ತುವುದೇ ಒಂದು ಸರ್ಕಸ್ ತರಹ. ಸೈಕಲ್ ಹಿಂದೆ ನಿಂತು ಬಗ್ಗಿ ಹಾಂಡಲ್ ಬಾರ್ ಹಿಡಿದು, ಸೈಕಲ್ ಮುಂದೆ ತಳ್ಳುತ್ತಾ ಹಿಂದಿನಿಂದ ಡೈವ್ ಮಾಡುವತರಹ ಸೈಕಲ್ ಹತ್ತುತ್ತಿದ್ದರು. ಇದೊಂದು ನಶಿಸಿ ಹೋದ ಕಲೆ. ಈಗಿನ ಯುವಕರು ಈ ದೃಶ್ಯ ನೋಡೇ ಇಲ್ಲ. ಅವರು ಕಾಲಿಗೆ ಚಪ್ಪಲಿ ಹಾಕುತ್ತಿರಲಿಲ್ಲ. ಏಕೆಂದರೆ ಅದು ಮಡೀಗೆ ಬರೋದಿಲ್ಲ. ಹಾಗೇ ತಮ್ಮ ಸೈಕಲ್ ಸೀಟಿಗೆ ಕೃಷ್ಣಾಂಜಿನ ಹಾಕಿಸಿದ್ದರು. ಅದು ಚರ್ಮದ ಸೀಟಿನ ಮೈಲಿಗೆಯನ್ನು ಇವರಿಂದ ಇನ್ಸುಲೇಟ್ ಮಾಡುತ್ತಿತ್ತು.

ಇವರು ಕೋರ್ಟ್‌ನಿಂದ ವಾಪಸ್ ಬಂದು ದೇವರ ನೈವೇದ್ಯ ಮಾಡುವವರೆವಿಗೂ ಎಲ್ಲರಿಗೂ ಉಪವಾಸ ಮತ್ತು ಹಪಾಹಪ. ಅದಕ್ಕೆ ಅವರೆಲ್ಲಾ ಅಲ್ಲಿದ್ದ ಕೊಬ್ಬರಿ, ಬೆಲ್ಲ, ಅವಲಕ್ಕಿ ಕದ್ದು ಫಲಾಹಾರಮಾಡಿ ಇವರು ಕೋರ್ಟ್‌ನಿಂದ ಬರುವವರೆಗೆ ತಮ್ಮ ಪ್ರಾಣವನ್ನು ಹಿಡಿದಿಟ್ಟುಕೊಂಡಿರುತ್ತಿದ್ದರು.

ಒಂದು ದಿನ ಅವರನ್ನು ನಮ್ಮ ಮನೇಲಿ ನಡೆಯುವ ನಮ್ಮ ತಾತನ ತಿಥೀಗೆ ಊಟಕ್ಕೆ ಕರೆಯಲು ಹೋದೆ. ಅವರು ಮಡಿಯಲ್ಲಿದ್ದರು ದೇವರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಹಾಕುತ್ತಿದ್ದರು. ಆ ಸಮಯದಲ್ಲಿ ಆ ಮಡೀ ಪಂಚೆ ಬಿಗಿಯಾಗಿರಲು ಅವರು ಸೊಂಟಕ್ಕೆ ಒಂದು ಬಣ್ಣದ ಪಟ್ಟಿ ಕಟ್ಟಿದ್ದರು. ಸರಿಯಾಗಿ ನೋಡಲು ಅದು ಅವರ ಕೋರ್ಟ್ ಟೈ ಆಗಿದ್ದಿತು. ನಾನು ತಬ್ಬಿಬಾಬ್ಬಾಗಿ ಏನೂ ತೋಚದೆ ಮನೆಗೆ ಬಂದೆ.

ಶ್ರಾದ್ಧದ ದಿನ ಅವರು ನಮ್ಮ ಮನೆಗೆ ಬಂದರು. ಜೊತೆಗೆ ಒಂದು ದೇವರ ಪೆಟ್ಟಿಗೇನೂ ಇತ್ತು. ಆ ಪೆಟ್ಟಿಗೇನು ಇವರ ಟೈಯಿಂದ ಬಿಗಿಯಾಗಿ ಕಟ್ಟಿದ್ದರು. ನನಗೆ

ಇನ್ನು ಸುಮ್ಮನಿರಲಾಗಲಿಲ್ಲ. ಸಂಭಾಷಣೆ ಹೀಗಿತ್ತು:

''ರಾಯರೇ ಇದು ನಿಮ್ಮ ಟೈ ಅಲ್ಲವೆ''

''ಹೌದು. ಅದರಿಂದೇನೀಗ?''

''ಅದನ್ನು ಹೀಗೆ ದೇವರ ಪೆಟ್ಟಿಗೆಗೆ ಕಟ್ಟಬಹುದೇ? ಮೈಲಿಗೇ ಆಗೋದಿಲ್ಲವೆ?''

''ನಾನು ಅದನ್ನ ಚೆನ್ನಾಗಿ ಒಗೆದು ಮಡೀ ಮಾಡೇ ಕಟ್ಟಿರೋದು. ಪರವಾಗಿಲ್ಲ ಇವನು. (ಅಲ್ಲೇ ಅಂದಿನ ವಡೇಗೆ ಉದ್ದಿನಬೇಳೆ ರುಬ್ಬುತ್ತಿದ್ದ ಅಡುಗೆ ಮಾಡುವವರನ್ನು ಉದ್ದೇಶಿಸಿ) ನೋಡೋ ಪ್ರಾಣೇಶ ಮೂರು ಮೆಣಸಿನ ಕಾಯಿ ಉದ್ದ ಇಲ್ಲಾ ಇವನು. ನನಗೇ ಮಡೀ ಮೈಲಿಗೆ ಹೇಳಿಕೊಡೊದಕ್ಕೆ ಬರ್ತಾನೆ''

ಪ್ರಾಣೇಶ ''ಹೋಗಲೀ ಬಿಡಿ ರಾಯರೇ. ಈಗಿನ ಕಾಲದ ಹುಡುಗರು (ಆಗ ನಲವತ್ತರ ದಶಕ) ನಿಮ್ಮ ಕೆಲಸ ನೀವು ನೋಡಿಕೊಳ್ಳಿ. ಪೂಜೇ ಶುರು ಮಾಡಿ. ಆಗಲೇ ತುಂಬಾ ಲೇಟಾಯಿತು'' ಎನ್ನುತ್ತಾ ಗೊಜ್ಜಿಗೆ ಹಾಗಲಕಾಯಿ ಹೆಚ್ಚಲು ಶುರು ಮಾಡಿದರು.

ನಮ್ಮ ರಾಯರು ನನ್ನನ್ನು ಅಷ್ಟಕ್ಕೆ ಬಿಡ್ತಾರಾ? ನನ್ನನ್ನು ಉದ್ದೇಶಿಸಿ ''ಲೋ, ಅಧಿಕಪ್ರಸಂಗಿ, ತಲೆಹರಟೆ, ನಿನಗೆ ಸ್ಕೂಲಲ್ಲಿ ಇಂಗ್ಲೀಷ್ ಹೇಳಿಕೊಡೊದಿಲ್ಲವಾ? ಎಂದರು.

''ಸ್ವಾಮೀ, ಹೇಳಿಕೊಟ್ಟಿದ್ದಾರೆ. ಅದರಿಂದೇನು'' ಎಂದು ಸವಾಲ್ ಹಾಕಿದೆ.

''ಹಾಗಾದರೆ ಇಂಗ್ಲೀಷ್ ಅಲ್ಲಿ ಟೈ ಅಂದರೇನು?'' ಎಂದರು. ನಾನು ಇನ್ನೋಸೆಂಟ್ ಆಗಿ ''ಟೈ ಅಂದರೆ ಕಟ್ಟು ಅಂತ ಅರ್ಥ'' ಅಂದೆ.

''ಸರೀ ಮತ್ತೆ, ಈ ಟೈಯಿಂದ ಕುತ್ತಿಗೇನೂ ಕಟ್ಟ್ತೀನಿ, ಸೊಂಟಾನೂ ಕಟ್ಟ್ತೀನೀ. ಅದನ್ನ ಮಡೀ ಮಾಡೀ ನನ್ನ ದೇವರ ಪೆಟ್ಟಿಗೇನೂ ಕಟ್ಟ್ತೀನಿ. ನಿನಗ್ಯಾಕೋ ಇಲ್ಲದ ಉಸಾಬರೀ. ನಿನ್ನ ಕೆಲಸ ನೋಡಿಕೋ ಹೋಗು'' ಎಂದು ಪೂಜೆಗೆ ಕೂತರು.

ನನ್ನ ಮುಂದಿನ ಕೆಲಸ ಒಡೇ ಪಾಯಸದ ಊಟ. ಅದನ್ನು ಇದಿರು ನೋಡುತ್ತಾ ಅಲ್ಲೆ ಇದ್ದ ಕಲ್ಲು ಬೆಂಚಿನ ಮೇಲೆ ಕೂತೆ.



ಅಯ್ಯೋ ಕೊಡ್ರಿ ಇಲ್ಲಿ,
ಮಹಾ ಹವಾಲಾ ಕೊಟ್ಹಾಗೆ
ಆಡ್ತೀರಲ್ಲಾ!

ಮಾರುತಿ ಸವಾರಿ

ಚಂಚಲಾ ಸುರತ್ಕಲ್

''ಮಾರುತಿರಾಯ ಬಲುಭೀಮ, ಭಕ್ತರ ಮೇಲೆ ಬಲು ಪ್ರೇಮ'' ಅಜ್ಜಿಯ ಬಾಯಿಂದ ಬಂದ ಈ ಹಾಡನ್ನು ಪುಂಖಾನುಪುಂಖವಾಗಿ ಕೇಳಿ-ಕೇಳಿ ಕಿವಿ ತೂತು ಮಾಡಿಕೊಂಡು ಬೆಳೆದಿದ್ದ ನರ್ಸುವಿಗೆ ಸಹಜವಾಗಿಯೇ 'ಮಾರುತಿ' ಶಬ್ದದ ಮೇಲೆ ಅನುರಾಗ ಮೂಡಿ ಹೆಮ್ಮರವಾಗಿ ಬೆಳೆದಿತ್ತು. ಮಾರುತಿ ಒಲಿಯದವರಿಗೆ ನಾ ಒಲಿಯಲಾರೆ ಎನ್ನುತ್ತಿದ್ದ ಈ ಕನ್ನಿಕಾ ಪರಮೇಶ್ವರಿ, ಸೈಕಲ್ಲನ್ನೂ ಒಲಿಸಿಕೊಳ್ಳದ ರಾಯರ ಕೈಯಲಿ ತಾಳಿ ಬಿಗಿಸಿಕೊಂಡದ್ದೇ ತಡ, ಒಂದಾದ ಮೇಲೆ ಒಂದರಂತೆ ಮೂರು ಮಾರುತಿಯರ ತಾಯಿಯಾದಳು. ಮಾರುತಿಯ ಮೇಲಿನ ಪ್ರೀತಿ ಹೋಗದೇ ಕನಸಿನಲ್ಲೂ ಈ ಮಾರುತಿ ರಾಯ ಕಾಡಿದಾಗ ನರ್ಸು ಕೈಗೆ ತಾಯಿತ ಬಂತು. ಅದರಿಂದ ಹೆಚ್ಚಿನ ಪ್ರಯೋಜನವೇನೂ ಆಗದೇ ಎಚ್ಚರವಿದ್ದಾಗ ರಾಯರಿಗೆ ಮಾರುತಿಯ ಬಗ್ಗೆ ಮನವರಿಕೆ ಮಾಡಿಕೊಡುತ್ತಿದ್ದಳು, ಇನ್ನು ತಡ ಮಾಡಿದ್ರೆ ನರ್ಸು ತಲೆ ಕೆಟ್ಟು ತಮ್ಮ ತಲೆಯೂ ಕೆಡುವ ಸ್ಥಿತಿಗೆ ಬರುವ ಮೊದಲು ಏನಾದರೂ ಒಂದು ಗಟ್ಟಿ ನಿರ್ಧಾರ ತೆಗದುಕೊಳ್ಳಬೇಕೆಂದು ರಾಯರು ಯೋಚಿಸಲು ಶುರುಮಾಡಿದ್ದೇತಡ ''ಅಲ್ಲರೀ, ಎಂತೆಂಥವರೆಲ್ಲಾ ಸಾಲ ಸೋಲ ಮಾಡಿ ಒಂದಕ್ಕೆ ಮೂರರಷ್ಟು ಬಡ್ಡಿ-ಚಕ್ರಬಡ್ಡಿ ತೆತ್ತು 'ಮಾರುತಿ' ಕಾರು-ವ್ಯಾನು ತೆಗೆದುಕೊಳ್ಳುತ್ತಾರೆ. ನೀವು ಇಷ್ಟು ವರ್ಷ ಬ್ಯಾಂಕ್‌ನಲ್ಲಿ ಆಫೀಸರ್ ಆಗಿ ಕೆಲ್ಸ ಮಾಡಿದ್ದು ದಂಡಕ್ಕೆ. ಅಂತಾ ಚೆನ್ನಾಗಿ ಲೋನ್ ವಿತ್ ಲೆಸ್ ಇನ್‌ಟ್ರೆಸ್ಟ್ ಕೊಡುತ್ತಾರೆ ಮಾರುತಿಕಾರನ್ನು ತೆಗೆದುಕೊಳ್ಳಲು. ನೀವೇನಾದ್ರು ಅದರ ಪ್ರಯೋಜನ ಪಡೆದುಕೊಂಡಿದ್ದೀರಾ ಊಹೂಂ ಇಲ್ಲವೇ ಇಲ್ಲ ಅದಕ್ಕೂ ಭಾತಿ ಬೇಕ್ರಿ. ಸುಮ್ಮನೆ ಬಕ್ಕ ತಲೆ ಹೊತ್ಕೊಂಡಿದ್ದೇ ಬಂತು ಭಾಗ್ಯ ಅಷ್ಟೇ'' ಎಂಬ ನರ್ಸು ಮಾತಿಗೆ ರಾಯರು 1 ಲಕ್ಷ 86 ಸಾವಿರ ರೂಪಾಯಿ ಡೀಲರ್‌ಗೆ ದಕ್ಷಿಣಗೆ ಕೊಡ್ತು ಅತಿ ಬಲುಭೀಮ ತೂಕದ ಮಾರುತಿಯನ್ನು ಮನೆ ಬಾಗಿಲಿಗೆ ತಂದು ನಿಲ್ಸೇ ಬಿಟ್ರು ರಾಯರು! ಅಂತೂ ನರ್ಸುವಿನ ಚಿಕ್ಕಂದಿನ ಆಸೆ ಕೈಗೂಂಡಿತ್ತು. ದೊಡ್ಡವರ ಆಸೆ ಗರಿಕೆದರಿತ್ತು. 'ರೀ, ನಾನೂ ಡ್ರೈವಿಂಗ್ ಕಲೀತೀನಿರಿ. ಮನೆಯಲ್ಲಿ ಒಬ್ಬರಿಗಿಂತ ಇಬ್ಬರು ಡ್ರೈವಿಂಗ್ ಕಲಿತಿದ್ದರೆ ಒಳ್ಳೆಯದಲ್ವಾ, ಯಾವುದಾದರೂ ಸಮಯಕ್ಕೆ ಬೇಕಾಗುತ್ತೆ ಎಂದು ರಮಿಸಿದ ನರ್ಸುವಿನ ಸಮಯಸ್ಫೂರ್ತಿಯಾವುದೂಂತ ರಾಯರಿಗೆ ಅರ್ಥವಾಗಲಿಲ್ಲ ಅವಳ ಅಪೇಕ್ಷೆಯನ್ನು ನಯವಾಗಿಯೇ ರಾಯರು ಉಪೇಕ್ಷಿಸಿದರೂ ಈ ನಯ ವಿನಯಕ್ಕೆ ಬಗ್ಗುವಂತ ನರ್ಸು ಅಲ್ಲವೇ ಅಲ್ಲ ಇದನ್ನೆಲ್ಲಾ ಬಗ್ಗಬಡಿಮು 'ನೀವೇನು ನನಗಾಗಿ ಖರ್ಚು ಮಾಡಬೇಡಿ ಗೊತ್ತಾಯ್ತಾ' ಅಂದಳು. ರಾಯರಿಗೆ ಇದು ಖರ್ಚು ಬಾಬ್ತಿನ ಪ್ರಶ್ನೆಯಲ್ಲ. ಅವರ ಆತಂಕವೇ ಬೇರೆ, ಒಂದು ಜಿರಲೆ ಎದುರಿಗೆ ಬಂದ್ರೆ, ಅದನ್ನ ನೋಡಿ ಹೆದ್ರೂ ನರ್ಸು, ಗೊತ್ತು ಗುರಿ ಇಲ್ಲದೆ, ಸಿಕ್ಕ-ಸಿಕ್ಕ

ಕಡೆ ಗಾಡಿಯನ್ನು ನುಗ್ಗಿಸುವ ಲಾರಿ ಬಸ್ಸು, ಆಟೋಗಳು ಬಂದ್ರೆ ಅವಳಿಗೆ ಹೇಗಾಗಬೇಡ. ಎಲ್ಲಾದ್ರೂ, ತನ್ನ ಹೊಸ ಮಾರುತಿಯನ್ನು ತೆಗದುಕೊಂಡು ಹೋಗಿ ಡಿಕ್ಕಿ-ಪಲ್ಟಿ ಹೊಡಿಸ್‌ದ್ರೆ, ಗತಿಯೇನು ಅನ್ನುವ ಭಯವೂ ಈ ಆತಂಕದೊಂದಿಗೆ ಸೇರಿತ್ತು. ನರ್ಸುಗಂತೂ ಏನೂ ಆಗೋದಿಲ್ಲಾಂತ ರಾಯರಿಗೆ ಖಾತರಿ. ಆದ್ರೆ ರಾಯರ ಸಮಾಜಾವಣೆಗೆ ನರ್ಸು ಹತ್ತಿರ ಉತ್ತರ ರೆಡಿ ಇತ್ತು' ನನಗೇಕೆ ನಿಮ್ಮ ಹೊಸ ಕಾರಿನ ಸುದ್ದಿ. ಅದು ನನಗೆ ಬೇಡವೇ ಬೇಡ. ನಾನು ಸಿಟಿಯಲ್ಲಿ ಡ್ರೈವಿಂಗ್ ಸ್ಕೂಲ್‌ಗೆ ಸೇರುತ್ತೇನೆ ಆಯ್ತಾ.'' ಅಂತ ಮುಕ್ತಾಯ ಹಾಡಿದಳು ರಾಯರಿಗೆ ಈ ಹುಚ್ಚಾಟದ ಬಗ್ಗೆ ಸ್ವಲ್ಪ ಅನುಮಾನವಿತ್ತು. 'ಎಲ್ಲೋ, ಎರಡು ದಿನದ ಆಟ ಅಷ್ಟೆ. 25-30 ಕಿ.ಮೀ ದೂರವಿರುವ ಸಿಟಿಗೆ ಹೋಗಿ ಡ್ರೈವಿಂಗ್ ಕಲಿಯಲು ಸಾಧ್ಯವೇ? ಒಂದೆರಡು ದಿನ ಹೋಗಿ ಆಮೇಲೆ ಸುಸ್ತು ಆಯಾಸಾಂತ ತೆಪ್ಪಗೆ ಮನೆಯಲ್ಲಿ ಕೂರುತ್ತಾಳೆ ಅನ್ನುವ ತಾರ್ಕಿಕ ಧೈರ್ಯದ ಮೇಲೆ ರಾಯರು ಅಸ್ತು ಅಂದ್ರು.

ಗೌರಿ ಹಬ್ಬದ ಅರಿಶಿನ ಕುಂಕುಮಕ್ಕೆಂದು ತೌರು ಮನೆಯಿಂದ ಬಂದಿದ್ದ ಹಣವನ್ನು ಡ್ರೈವಿಂಗ್ ಸ್ಕೂಲ್ ಮಾಸ್ಟರ್ ಕೈಗೆ ಹಾಕಿ, ಮಾರುತಿಯ ಸ್ಟೀರಿಂಗ್ ವೀಲನ್ನು ಕೈಗೆ ತೆಗೆದುಕೊಂಡೇ ಬಿಟ್ಟಳು ನರ್ಸು. ಹಳೇ ಡಬ್ಬದ್ ಕಾರು ಗುಡುಗುವ ಗಡ ಗಡ ದಬ-ಡಬ ಸದ್ದಿಗೆ ನರ್ಸುವಿನ ನಾಜೂಕು ಮೈ ಕಂಪಿಸಿ ನರಳಿತು. ಹೆಲ್ತ್‌ಕ್ಲಬ್‌ನಲ್ಲಿರುವ ವೈಬ್ರೇಟಿಂಗ್ ಮಿಷೀನ್ ಮೇಲೆ ನಿಂತ ಅನುಭವ ನರ್ಸುವಿಗಾಯಿತು. ಯಡ್ಡಾ-ದಿಡ್ಡಿ, ಹಳ್ಳ-ಕೊಳ್ಳವೆನ್ನದೆ, ದಿಣ್ಣೆ ತಗ್ಗನ್ನು ನೋಡದೆ ಅಥವಾ ನೋಡಿಯೂ ಅದನ್ನು ಹೇಗೆ ನಿಭಾಯಿಸಬೇಕೆಂದು ತಿಳಿಯದೇ- ಒಳ್ಳೇ ಹುರುಪಿನಿಂದ ನರ್ಸು ಕಾರನ್ನು ಓಡಿಸಿಯೇ ಓಡ್ಸಿದಳು. ಮೆದು ಸ್ವಭಾವ ಮಾಸ್ಟರ್ ಅವಳ ಡ್ರೈವಿಂಗ್ ವೈಖರಿಗೆ ಬೆರಗಾಗಿ 'ಹಾಯ್, ದೇವರೆ' ಎಂದು ದೇವರ ಸ್ಮರಣೆ ಮಾಡಿರುವುದನ್ನು ಕಂಡು ನರ್ಸುವಿಗೆ ಒಳಗೊಳಗೆ ಒಂಥರಹ ಥ್ರಿಲ್ಲಿಂಗ್ ಅನುಭವ. 'ಅಮ್ಮಾ, ಎಲ್ರೂ ಒಂದು ತಿಂಗಳು ಕಾರು ಬಿಡೋಕೆ ತೆಗೆದುಕೊಂಡ್ರೆ, ನೀವು 15 ದಿನದಲ್ಲೇ ಡ್ರೈವಿಂಗ್ ಮರ್ಮವನ್ನೆಲ್ಲಾ ಕರತಲಾಮಲಕ ಮಾಡಿಕೊಳ್ಳುವ ಹಾಗಿದೆ. ಬಹಳ ಹುಷಾರ್ರಿ ನೀವು ಸಾಹೇಬ್ರಿಗಿಂತ ಪರ್‌ಫೆಕ್ಟಾಗಿ ಡ್ರೈವಿಂಗ್ ಕಲಿಬೇಕು ಮೇಡಂ ಎಂದು ಹೇಳಿ ಮಾಸ್ಟರು ತಮ್ಮ ಹಳೆ ಕಾರನ್ನು ಸುಸ್ಥಿತಿಯಲ್ಲಿಡುವ ಯತ್ನ ಮಾಡಿದರು. ಅವರ ಹುರಿದುಂಬಿಕೆಯ ಮಾತಿನ ಅರ್ಥ ಅರಿಯದ ನರ್ಸುಗೆ ಭೀಮಬಲ ಬಂತು. ಸ್ಕೂಲಿನಲ್ಲಿ ಕಲಿತು ಬಂದ ನರ್ಸು ಒಂದು. ದಿನವೂ ಸುಸ್ತು- ಆಯಾಸ ಅಂದೀರಾ ಒಳ್ಳೆ ಪೊರೆ ಕಳಚಿದ ಹಾವಿನ ತರಹ ಲವಲವಿಕೆಯಿಂದ ಸಮಸ್ತ ಕೆಲಸವನ್ನೂ ಲೀಲಾಜಾಲವಾಗಿ ನಿಭಾಯಿಸಿ, ರಾಯರ ತರ್ಕವನ್ನು ಸುಳ್ಳಾಗಿಸಿದಳು.

ಬ್ಯಾಂಕ್‌ನಿಂದ ಬಂದಿದ್ದ ರಾಯರು ಯಾಕೊ ಸುಸ್ತು ಸಂಕಟ ಅನ್ನುತ್ತಲೇ ಮನೆ ಮೆಟ್ಟಿಲನ್ನು ಏರಿದ್ದರು. ಬೆಳಗ್ಗಿನಿಂದ ರಾಯರು ಸ್ವಲ್ಪ ಮಂಕಾಗಿದ್ದನ್ನು ನರ್ಸು ಗಮನಿಸಿದ್ದರೂ.... ಅವರ ಕಡೆ ಗಮನ ಹರಿಸಲು ಪುರುಸೊತ್ತು ಸಿಕ್ಕಿರಲಿಲ್ಲ ಮನದನ್ನೆ

ತಂದು ಕೊಟ್ಟ ತಣ್ಣನೆಯ ಐಸ್‌ನೀರು ಅವರ ಸುಸ್ತನ್ನು ಉಪಶಮನಗೊಲಿಸಲಿಲ್ಲ. ಒಂದೇ ಸಮನೆ ಬೆವರು ಸುರಿದು ಎದೆ ಢಳಕ್ ಎನ್ನುತ್ತೆ ಅನ್ನುವಾಗ ನರ್ಸು ಎಚ್ಚೆತ್ತುಕೊಂಡಳು. ಯಾಕೊ ರಾಯರ ದುರ್ಬಲ ಹೃದಯದ ಮೇಲೆ ಗುಮಾನಿ ಬಂತು ಬನ್ರಿ ಡಾಕ್ಟರ ಹತ್ತಿರ ಹೋಗೋಣಾಂತ ಕರೆದಾಗ ರಾಯರು ಮಾತಿಲ್ಲದೆ ಮಿಟಿ ಮಿಟಿ ನೋಡಿದರು. ನರ್ಸಿಂಗ್ ಹೋಂ ಗೆ ಫೋನ್ ಮಾಡಿದಾಗ 'ಅವ್ರನ್ನ ಇಲ್ಲಿಗೇ ಕರೆದುಕೊಂಡು ಈಗ್ಲೆ ಬನ್ನಿ' ಅಂತ ಹುಕುಂ ಬಂತು. ಈ ಅವೇಳೆ ಹೊತ್ತಿನಲ್ಲಿ ಟಾಕ್ಸಿಯವರು, ಆಟೋದವರು ಅಷ್ಟುದೂರ ಬರುವುದಂತೂ ದೂರವೇ ಉಳಿಯಿತು. 'ಹಾಂ' ಮಾರುತಿ ದೇವಾ' ಎಂದು ಒಂದು ನಿಮಿಷ ಕಣ್ಣು ಮುಚ್ಚಿಕೊಂಡು ಇಷ್ಟದೇವನನ್ನು ನೆನದಳಷ್ಟೆ! ಆ ಮಾರುತಿ ಇನ್ನೊಂದು ರೂಪದಲ್ಲಿ ಹಾಜರಿದ್ದ. ಕಣ್ಣು ತೆರೆದೊಡನೆ ಅವಳ ಕಣ್ಣಿಗೆ ಬಿದ್ದದ್ದು ರಾಯರು ಬ್ಯಾಂಕಿನಿಂದ ಬಂದು ಬಿಸಾಕಿದ್ದ ಕಾರಿನ ಕೀ. ಚಂಗನೆ ಮನಸ್ಸಿಗೊಂದು ಯೋಚನೆ ಹೊಳದಿದ್ದೆ ತಡ ಧೈರ್ಯಮಾಡಿ ರಾಯರನ್ನು ಮಾರುತಿಯಲ್ಲಿ ಕೂರಿಸಿಕೊಂಡು ನರ್ಸಿಂಗ್ ಹೋಂ ಗೆ ಕಾರನ್ನು ಓಡಿಸಿದಳು.

ಡಾಕ್ಟರ್ ರಾಯರನ್ನು ಯಂತ್ರ ತಂತ್ರದಲ್ಲಿಟ್ಟು ಪರೀಕ್ಷಿಸಿ ನರ್ಸು ಕಡೆ ತಿರುಗಿ 'ಅಮ್ಮಾ' ರಾಯರಿಗೆ ಅಟ್ಯಾಕ್ ಬಂದಿದೆ. ಒಳ್ಳೆ ಸಮಯಕ್ಕೆ ಸರಿಯಾಗಿ ಕರೆದುಕೊಂಡು ಬಂದು ಔಷದೋಪಚಾರ ಮಾಡಿಸಿದ್ದೀರಾ. ಇನ್ನೂ ಸ್ವಲ್ಪ ತಡವಾಗಿದ್ದರೂ ಪ್ರಾಣಾಪಾಯವಿತ್ತು. ಇನ್ನು ಆ ಭಯವಿಲ್ಲ ಮುಂದಿನದನ್ನು ನಾವು ನೋಡಿಕೊಳ್ಳುತ್ತೇವೆ' ಅಂತಾ ನರ್ಸುಗೆ ಸಭಾಸ್‌ಗಿರಿ ಕೊಟ್ಟರು.

ರಾಯರಿಗೆ ಜ್ಞಾನೋದಯವಾಗಿತ್ತು ಉಪೇಕ್ಷೆ ಉತ್ಪ್ರೇಕ್ಷೆಗೆ ತಿರುಗಿತ್ತು 'ನರ್ಸಿ' ಎಂಬ ಒಲುಮೆಯಿಂದ ಕರೆದು ಏನೂ ಹೇಳಲು ಬಾಯಿತೆಗೆದಾಗ, ನರ್ಸು ಗೆಲುವಿನ ನಗೆ ನಗುತ್ತಾ 'ನೋ ಕಾಂಪ್ಲಿಮೆಂಟ್ ಅಂಡ್ ಕಾಮೆಂಟ್ಸ್ ಪ್ಲೀಸ್' ಅಂದಳು.

ಮಾರುತಿರಾಯ ಭಕ್ತಳ ಮೇಲೆ ಬಲು ಪ್ರೀತಿ ತೋರಿಸಿದ್ದ.



"ನೀನೂ
ಸೇರ್ಕೊಬೋದಲ್ಲ
ಪೇಜಂಟ್‌ಗೆ ಅಂತ ಹೇಳ್ದೆ
ಅಷ್ಟೆ"

ಗಜೇಂದ್ರ ಮೋಕ್ಷ

ಪಾ.ರಾ

ಕಾನೂನ್ ತೊಟ್ಲ ತೂಗ್ತಿದ್ರು
ನ್ಯಾಯದ ಜೋಗುಳ ಹಾಡಿ!
ರಾಶಿ ರಾಶಿ ಪುಸ್ತಕ ತಂದ್ರು
ಊರ್ಗೆಲ್ಲ ಮೆರವಣಿಗೆ ಮಾಡಿ!

ನಡಗ್ತು ಮೇಜು ಕುರ್ಚಿ
ಮಿಂಚಿನಂಥ ಮಾತ್ ಕೇಳಿ!
ಕಟ್ಲೇನ ಕೂಗ್ಸಿ 'ಅಡ್ಜರ್ನ್' ಅಂದ್ರು
ಮುಂದಿನ ವರ್ಷದ ಕ್ಯಾಲೆಂಡರ್ ನೋಡಿ!

ನಾಹೇಳೋದೆಲ್ಲ ಸತ್ಯ ಎಂದ ಸಾಕ್ಷಿ
ನರಕದ ಭಯ ಹೊತ್ತು!
ಅಪರಾಧೀಗೂ ಆಗಿತ್ತು ಸುಸ್ತು
ಫೀಜ್ ತೆತ್ತು ತೆತ್ತು!

'ಸತ್ಯ ನುಡಿದ್ರೆ ಮೂರ್ ವರ್ಷ ಶಿಕ್ಷೆ'
ಎಂದ್ರು ದೊಡ್ಡಲಾಯ್ರು ಗುಟ್ಟಾಗಿ!
'ಆಯ್ತಲ್ಲ ಮೂರ್‌ವರ್ಷ ನಿಮ್ಮಾಫೀಸಿಗೆ ಬಂದು'
ಎಂದೇಬಿಟ್ಟಅಪರಾಧಿ ಬಲು ಖಾರ್‍ವಾಗಿ!

ಡ್ಯಾವರಂಗಿರ್ಲಿ ದೊಡ್ಡ ಲಾಯ್ರು
'ನಡ್ಲಿ' ಕೇಸ್‌ನ ನೀವೆ ಎಂದ ಅಪರಾಧಿ!
ತಿರುಗ್ತು ತಲೆ ಚಿಕ್ಕಲಾಯ್ರಿಗೆ
ಏರಿಸಿರದು ಚಿಟಿಕೆ ಸೀನಿಯರ್ ಹಾಗೆ!

'ಗಜೇಂದ್ರ ಮೋಕ್ಷದ ಕಥೆಗೊತ್ತ'
ಎಂದ್ರು ಚಿಕ್ಕಲಾಯ್ರು ಮೂಗೊರ್ಸ್ಕೊಳ್ತ!
'ವಿಷ್ಣು ಮೊಸಳೆನ ಕೊಂದ ಕಥೆ ಅಲ್ವ'
ಎಂದ ಅಪರಾಧಿ ನಗ್ತ ನಗ್ತ!

ಕೋರ್ಟಿಗೆ ಬಂದ್ರು ಚಿಕ್ಕ ಲಾಯ್ರು, ಒಂದಿವ್ಸ
ಗಮ್ಮತ್ತಿನಿಂದ ಕೈಬೀಸ್ಕೊಂಡು!
'ಹತ್ತು ಕಟಕಟೆ, ಮೋಕ್ಷದ ಕಾಲ ಬಂತು' ಎಂದ್ರು
ಜಿಡ್ಜ್ ಸಾಹೇಬರಿಗೇನೋ ಹೇಳ್ಕೊಂಡು!

ಸುತ್ಲು ದೃಷ್ಟಿಹರಿಸಿ ಕೇಳ್ದ ಅಪರಾಧಿ
'ಮೊಸಳೆ ಎಲ್ಲಿ? ಕೊಳದಲ್ಲಿ ಮಲಗೈತ!'
'ಇವತ್ತು ಬರುಲ್ಲ ಕೋರ್ಟಿಗೆ, ಬೇಗ ಒದರು ಸತ್ಯ'
ಎಂದೇ ಬಿಟ್ರು ಚಿಕ್ಕ ಲಾಯ್ರು ಫೀಜ್ ಎಣಿಸ್ತ!

ಅನರ್ಥಕೋಶ

ಎನ್. ಬಿ. ಬದರೀನಾರಾಯಣ

ಪ್ರೇತೀಯಿಸ್ಟ್ - ಭೂತ, ಪ್ರೇತಗಳಲ್ಲಿ ನಂಬಿಕೆಯಿರುವವ.

ಹಾರುವರು - ಕೆಟ್ಟ ರಸ್ತೆಯಲ್ಲಿ ಓಡುವ ಬಸ್‌ನಲ್ಲಿ ಕಡೀ ಸಾಲಿನಲ್ಲಿ ಕುಳಿತಿರುವವರು.

Post Doctoral Work - ಡಾಕ್ಟರ ಕೈಯ್ಯಲ್ಲಿ ವಾಸಿಮಾಡಲಾಗದೇ ರೋಗದಿಂದ ಸತ್ತವನ ಅಂತ್ಯಕ್ರಿಯೆ.

- ಭುವನಸುಂದರಿ ಕಥಾನಕಲು-

ಅರುಣಾ ಕಾರಂತ

ಬ್ರಹ್ಮಾಂಡದಲ್ಲಿ ನಮ್ಮ ಭೂಗೋಳವೇ ಅತ್ಯದ್ಭುತ. ಭೂಗೋಳದಲ್ಲಿ ಮಾತ್ರ ಜೀವಿಗಳಿರುವುದು. ಅದರಲ್ಲಿಯೂ 'ಮನುಷ್ಯ' ಅನ್ನುವ 'ಬುದ್ಧಿವಂತ' ಎನ್ನಿಸಿಕೊಳ್ಳುವ ಕೋಡಂಗಿಗಳು ಕಾಣುವುದು ಮತ್ತಾವ ಗ್ರಹದಲ್ಲಿಯೂ ಅಸಾಧ್ಯ. ಅಂತೆಯೇ ಭೂಗೋಳ ಭಗವಂತನ ಮಹತ್ ಸೃಷ್ಟಿಯಾದರೆ, ಮನುಷ್ಯ ಭಗವಂತನ ಪರಿಪೂರ್ಣ ಸೃಷ್ಟಿ.

ಮನುಷ್ಯ ಬುದ್ಧಿಯನ್ನು ತೀಡಿ ತಿದ್ದಿ ಕಾಡಲೆವ ಆದಿಮಾನವನಿಂದ ಶಿಲಾಯುಗದ ಮಾನವನಾದ. ಬೆಂಕಿಯ ಉಪಯೋಗ ಕಂಡುಹಿಡಿದು ವಿಜ್ಞಾನಿಯಾದ. ಕಬ್ಬಿಣದ ಮೊನೆಯಿರುವ ಬಾಣ ಪ್ರಯೋಗಿಸಿ ಲೋಹಯುಗಕ್ಕೆ ಕಾಲಿಟ್ಟ. ಮಾಂಸ ಬೇಯಿಸಿ 'ರುಚಿ' ಯನ್ನು ತಿಳಿದ. ಗುಹಾವಾಸ ಬಿಟ್ಟು ಕಾಡು ಕಡಿದು ಕೃಷಿ ಮಾಡಿದ. 'ಗ್ರಾಮ' ಕಟ್ಟಿದ 'ನಗರ' ಬೆಳೆಸಿದ. ಮೊದಮೊದಲು ಕುದುರೆ ಸವಾರಿ ಮಾಡಿದವ ರೈಲು, ಕಾರುಗಳನ್ನು ತನ್ನ ಸಂಚಾರದ ಅನುಕೂಲದಕ್ಕಾಗಿ ಕಂಡುಹಿಡಿದ. ಹಕ್ಕಿಯಂತೆ ಹಾರಲು ಬಯಸಿ ವಿಮಾನಯಾನ, ರಾಕೆಟ್‌ಯಾನವನ್ನೂ ಮಾಡಿದ. ಚಂದ್ರನ ಮೇಲೂ ಕಾಲಿಟ್ಟ. ವಿಶ್ವಪರ್ಯಟನವನ್ನಷ್ಟೇ ಅಲ್ಲ ಅಂತರ್ಗ್ರಹಕ್ಕೂ ಲಗ್ಗೆಯಿಟ್ಟ. ಸಮಯದ ಉಳಿತಾಯವಾಯಿತು. ಗ್ಯಾಸ್ ಮತ್ತು ವಿದ್ಯುತ್ತು ಗೃಹಿಣಿಯು ಅಡಿಗೆಯ ಮನೆಯ ಕೆಲಸವನ್ನೂ ಹಗುರ ಮಾಡಿದವು. ಮನುಷ್ಯನು ಮನೋರಂಜನೆಗೆಂದು ಸಿನೇಮಾ ದೂರದರ್ಶನಗಳನ್ನೂ ಬೆಳಕಿಗೆ ತಂದನು.

ಮನುಷ್ಯನ ಬುದ್ಧಿ ಮತ್ತೆ ಬೆಳೆದಂತೆ ಸಮಯದ ಉಳಿದಂತೆ ಹೊಸ ಹೊಸ ಹವ್ಯಾಸಗಳನ್ನು ಬೆಳೆಸಿಕೊಂಡನು. ನಾಗರಿಕತೆ ಬೆಳೆದಂತೆ ಸೌಂದರ್ಯಪ್ರಜ್ಞೆಯನ್ನೂ ರೂಢಿಸಿಕೊಂಡನು. ಸೌಂದರ್ಯೋಪಾಸನೆ ಬೆಳೆದಂತೆ ತಾನೇ ಸುಂದರ/ಸುಂದರಿ ಎಂದು ತಿಳಿಯಲು ಸೌಂದರ್ಯ ಸ್ಪರ್ಧೆಗಳು ಬೆಳಕಿಗೆ ಬಂದವು. 'ಕ್ವೀನ್ ಗುಲ್ನಾರ್ಸ್ ರೈವಲ್' (Queen Gulnar's Rival)ಎಂಬ ಇಂಗ್ಲೀಷ್ ಕವಿತೆಯ ಸಾರಾಂಶವು ಇದಕ್ಕೊಂದು ಉದ್ಾಹರಣೆಯಾಗಿದೆ. ಗುಲನಾರ್ ಎಂಬ ರಾಣಿಯು ಇದ್ದಳು. ಅವಳ ಹತ್ತಿರ ಒಂದು ಕನ್ನಡಿಯಿತ್ತು. ಅದರ ಹತ್ತಿರ ಕೇಳಿದಾಗೊಮ್ಮೆ ಕ್ವೀನ್ ಗುಲನಾರ್‌ಳನ್ನು ಮೀರಿಸಿದ ಸುಂದರಿಯಿಲ್ಲ ಎಂದು ಅನ್ನುತ್ತಿತ್ತು. ಕ್ವೀನ್ ಗುಲನಾರಳಿಗೆ ತನಗೆ ಪ್ರತಿಸ್ಪರ್ಧಿ ಇಲ್ಲವೆಂಬ ಹೆಮ್ಮೆಯೊಂದಿಗೆ ದುಃಖವೂ ಆಗುತ್ತಿತ್ತು. ಒಂದು ದಿನ ಕನ್ನಡಿಯು ಕ್ವೀನ್ ಗುಲನಾರಳ ಪ್ರತಿಸ್ಪರ್ಧಿಯನ್ನು ತೋರಿಸಿತು. ರಾಣಿಗುಲನಾರ್‌ಳ ಮಗಳೇ ರಾಣಿ ಗುಲನಾರಳ ಪ್ರತಿಸ್ಪರ್ಧಿಯೆಂದು ಕನ್ನಡಿಯು ತೋರಿಸಿತ್ತು, ಕ್ವೀನ್ ಗುಲನಾರಳಿಗೆ ತನ್ನ

ಮಗಳೇ ತನ್ನ ಪ್ರತಿಸ್ಪರ್ಧಿಯೆಂದು ತಿಳಿದು ಸಂತಸವಾಯಿತು. ಇದು ಕವಿಕಲ್ಪನೆಯ ಸೌಂದರ್ಯ ರಾಣಿಯ ಸ್ಪರ್ಧೆ.

ಸ್ತ್ರೀ ಅನೇಕ ಕಾವ್ಯಗಳ ಕಾವ್ಯವಸ್ತು. ಸ್ತ್ರೀ ಸುಂದರಿಯಾಗಿ ಕಾಣಲು ಹೂ ಮುಡಿದು, ಹಣೆಗೆ ಕುಂಕುಮ, ಉಗುರಿಗೆ ಅಲತಿಕಾ (ದಮದರಂಗಿ) ಇಟ್ಟಳು, ತುಟಿಯ ಕೆಂಪುಬಣ್ಣ ಹೆಚ್ಚಿಸಲು ಎಲೆ ಅಡಿಕೆ ಸಹಾಯ ಮಾಡಿತು. ಮೈಗೆ ಗಂಧ ಪೂಸಿ ಸುಗಂಧಿತೆಯಾದಳು. ಆದರೆ ಆಧುನಿಕ ಸ್ತ್ರೀಯು ತುಟಿಗೆ ರಂಗು, ಕೆನ್ನೆಗೆ ರೋಜು, ಮೈಬಣ್ಣ ತಿಳಿಯಾಗಿಸಲು ಕ್ರೀಂ, ತಲೆಗೆ ಸುವಾಸನೆಯ ತೈಲ, ಆಧುನಿಕತೆಯ ಕೊಡುಗೆಗಳಾದ ಬಾಬ್‌ಕಟ್, ಕೃತ್ರಿಮವಾಗಿ ತಲೆಕೂದಲನ್ನು ಉಂಗುರುಂಗುರಗೊಳಿಸುವ ಉಪಕರಣಗಳು (ಕರ್ಲರ್ಸ್), ಮೈತುಂಬ ನವ್ಯ ನಾಗರಿಕ ಆಭರಣಗಳು, ಸ್ನಾನಕ್ಕೆ ಸುವಾಸಿತ ಸಾಬೂನುಗಳು ಕೆಲವೊಮ್ಮೆ ಇದ್ದ ಸೌಂದರ್ಯವನ್ನು ಹೆಚ್ಚಿಸಿದವು. ಕೆಲವೊಮ್ಮೆ ನಿಸರ್ಗದತ್ತ ಸೌಂದರ್ಯವನ್ನು ಮಂಕುಹಿಡಿಸಿ ನೋಡುಗರನ್ನು ಕಂಗೆಡಿಸಿದವು. ಬಳ್ಳಿಯಂತೆ ಬಳುಕುವ ದೇಹ ಕೆಲವರಿಗೆ ಡೀಸೆಂಟ್ ಎನ್ನಿಸಿದರೆ, ಕೆಲವರ ಕಣ್ಣಿಗೆ ಅದು ಹಾರಿಬಲ್ ಎನ್ನಿಸಿತು. ಆದರೂ ತಾನೇ ಚೆಂದ ಎನ್ನಿಸಿಕೊಳ್ಳುವ ಬಯಕೆಯನ್ನು ಬೆಳೆಸಿ ಪ್ರತಿ ಸ್ತ್ರೀಯನ್ನೂ ಮೋಡಿ ಮಾಡಿದ ಆಧುನಿಕ ಬೆಡಗಿನ ಜಗತ್ತು ತಾನೇ ಬೆರಗಾಗಿದೆ. ಈಗಲೂ ಸ್ತ್ರೀಯರಿಗೆ ನೀಳ-ಕತ್ತು ಸೌಂದರ್ಯದ ದ್ಯೋತಕವೆಂದು ತಿಳಿದ ಒಂದು ಜನಾಂಗದಲ್ಲಿ ಸ್ತ್ರೀಯರ ಕತ್ತು ನೀಳವಾಗಿಸಲು ಕುತ್ತಿಗೆಗೆ ಬಳೆಗಳನ್ನು ತೊಡಿಸುವ ರೂಢಿಯಿದೆ. ದಿನನಿತ್ಯ ಬೆಳಕು ಕಾಣುವ ಹೊಸ ವಿನ್ಯಾಸದ ಫ್ಯಾಶನ್ ಉಡುಪು ತೊಡಪುಗಳು ಕೆಲವೊಮ್ಮೆ ಬಡವ ಆನೆ ಸಾಕಿದಂತೆ ನಗೆಪಾಟಲಾಗುತ್ತಿದೆ.

ನಮ್ಮ ಭವ್ಯ ಭಾಗ್ಯೋದಾತ್ತದೇಶ ಭರತಭೂಮಿ ಬಡದೇಶ ಆದರೂ ತಾನೇನು ಕಡಿಮೆಯಿಲ್ಲವೆನ್ನುವಂತೆ ಒಂದೇಬಾರಿ ವಿಶ್ವಸುಂದರಿ ಕಿರೀಟ ಹಾಗೂ ಭುವನಸುಂದರಿ ಕಿರೀಟ ಪಡೆದು ಹೆಮ್ಮೆಪಟ್ಟಿತು. ಈ ಬಾರಿ ನಮ್ಮ ದೇಶದ ನಮ್ಮ ನಾಡಿಗೇ ಕಳಶಪ್ರಾಯವಾದ ಮುಖ್ಯಪಟ್ಟಣದಲ್ಲಿ ಭುವನಸುಂದರಿ ಸ್ಪರ್ಧೆ ನಡೆಸಲು ಮುಂದೆ ಬಂದಿತು. ಸ್ಪರ್ಧೆಗಾಗಿ ಪರ, ವಿರುದ್ಧ ಚರ್ಚೆಗಳಾದುವು. ಸ್ಪರ್ಧೆ ಬೇಡವೆನ್ನುವ ಬುದ್ಧಿಜೀವಿಗಳು ಸ್ಪರ್ಧೆಯಲ್ಲಿ ಭಾಗಿಗಳಾಗಲು ಅಸಮರ್ಥರಿರುವುದಕ್ಕೆ ಹಾಗನ್ನುತ್ತಿರಬೇಕೆನ್ನುವುದು ಬರೀ ಕುಹಕ ಅಲ್ಲವೆ? ಅದರಿಂದ ಬರುವ ಆದಾಯದಿಂದ ನಗರದ ಬೆಳವಣಿಗೆ ಮಾಡಬಹುದು ಅನ್ನುವುದು ಎಷ್ಟು ಉಚಿತ, ಒಂದೆರಡು ಬಿಳಿಯಾನೆಗಳ ಪಾಕೆಟ್‌ಗಳಿಗಿಳಿವ ಬ್ಲ್ಯಾಕ್‌ಮನಿ ಕಟ್ ಮಾಡಿದರೆ ಸಾಕು ಹೊಸದಾಗಿ ಮತ್ತೆ ನಾಲ್ಕು ನಗರಗಳನ್ನೆ ಕಟ್ಟಬಹುದಲ್ಲ. ಸೌಂದರ್ಯ ನೋಡುವ ದೃಷ್ಟಿ ಬೇಕು ಒಬ್ಬ (ಪುಂಡ) ಪುಢಾರಿ ಅಪ್ಪಣೆಸಿದರು 'ನಿತ್ಯವೂ ಪ್ರತಿ ನಗರದ, ಪ್ರತಿ ರಸ್ತೆಯ ಮೇಲೆ ನಡೆಯುವ ಫ್ಯಾಶನ್‌ಪರೇಡಿಗೇನಂತೀರಿ?' ಮತ್ತೊಬ್ಬರು ಸವಾಲೆಸೆದರು. ಮಂತ್ರಿಗಳು, ಸಾಹಿತಿಗಳು, ವಕೀಲರು, ರಾಜಕಾರಣಿಗಳು ಸ್ಪರ್ಧೆಯ ಪರ, ವಿರುದ್ಧ

ಸ್ವರವೆತ್ತಿ ಪುಕ್ಕಟೆ ಪ್ರಚಾರ ಗಿಟ್ಟಿಸಿದರು. ಕೆಲ ಮಹಿಳೆಯರು ಶೋರೂಮ್‌ನಲ್ಲಿರಿಸಿದ ರೆಫ್ರಿಜ್‌ರೇಟರುಗಳಿಗೆ ಡಾಮರು ಬಳಿದರಂತೆ! ಪಾಪ ಅವರಿಗೆ ಫ್ರಿಜ್‌ಗಳು ತಮ್ಮ ಪ್ರತಿಸ್ಪರ್ಧಿಗಳನ್ನಿಸಿದವೇನೋ! ಸ್ಪರ್ಧೆಯ ಪರವಾಗಿ ವಾದಿಸುವವರು ಸ್ಪರ್ಧೆಗೆ ಸ್ತ್ರೀಯರು ನಮ್ಮ ಕೈಮಗ್ಗದ ಅಥವಾ ರೇಶೀಮೆಯ ಸೀರೆಯುಟ್ಟು ಬರಬೇಕೆಂಬ ನಿಯಮ ಮಾಡಿದರೆ ಹೇಗೆ? ಆಗ ಇತರೇ ದೇಶಗಳಿಂದ ಬಂದ/ಬರುವ ಸುಂದರಿಯರಿಗೆ ಸೀರೆಯುಡಿಸುವ ಉದ್ಯೋಗವು ಕೆಲಜನರಿಗೆ ಕೆಲಸಮಯಕ್ಕಾದರೂ ಸಿಕ್ಕಿ ನಿರುದ್ಯೋಗವೂ ಸ್ವಲ್ಪ ಸಮಯಕ್ಕಾದರೂ ತಗ್ಗೀತಲ್ಲ. ಸ್ಪರ್ಧೆಯು ದಿನ ಸನಿಹ ಬಂದಂತೆ ಅರ್ಜೆಂಟಾಗಿ ಸುಂದರ ಕಾಣಲು ಎಲ್ಲೆಡೆ ಪೈಪೋಟಿ ಸುರುವಾಯಿತು. ಪರಿಣಾಮವಾಗಿ ಮತ್ತೂ ಸುಂದರ ಕಾಣಲು ಹೊಸ ಹೊಸ ಜೆಲ್ಲಿ ಲೋಶನ್‌ಗಳು, ಅರ್ಜೆಂಟಾಗಿ ಬಳುಕುವ ಬಳ್ಳಿಯಂತಾಗಲು ಅರ್ಜೆಂಟ್ ಜಿಮ್ನೇಶಿಯಮ್‌ಗಳು ಅರ್ಜೆಂಟಾಗಿ ಹುಟ್ಟಿದವು. ಬ್ಯೂಟಿಶಿಯನ್ಸ್, ಬ್ಯೂಟಿಪಾರ್ಲರ್‌ಗಳು ಮಿಂಚಿದವು. ಉಸ್, ಬುಸ್, ಅಂತ ವ್ಯಾಯಾಮ ಮಾಡಿದವರು ಸೌಂದರ್ಯದ ಭ್ರಮೆಯಲ್ಲಿ ತೇಲಿ ನಮ್ಮ ಅಪ್ಸರೆಯರಾದ ರಂಭೆ, ಊರ್ವಸಿ, ತಿಲೋತ್ತಮೆಯರನ್ನು ತಾವು ಮೀರಿಸಿದ್ದೇವೆ ಅಂದುಕೊಂಡರು. ಈಜುಡುಗೆಯಲ್ಲಿ ತುಂಡುಡುಪಿನಲ್ಲಿ ಸ್ಪರ್ಧಾಳುಗಳನ್ನು ತೋರಿಸುವುದು ನಮ್ಮ ಸಂಸ್ಕೃತಿಗೆ ಕುಂದೆಂದು ಆ ಬಗೆಯ ಸ್ಪರ್ಧೆಗಳನ್ನು ನಡೆಸುವುದಿಲ್ಲ ಎಂದು ಸ್ಪರ್ಧೆಯ ಆಯೋಜಕರು ಠರಾವು ಮಾಡಿದರು. (ಆದರದನ್ನು ಜನರ ಕಣ್ಣಿಂದ ದೂರ ನಡೆಸಿದರಾಯಿತಲ್ಲ!) ಸ್ಪರ್ಧೆ ವೀಕ್ಷಿಸಲು ಬಡಬೋರೆಗೌಡನಂತೂ ಬರಲಾರ! ಅವನ ಇಡೀ ಜೀವನದ ದುಡಿಮೆಯೂ ಸ್ಪರ್ಧೆ ನೋಡಲು ಪಡೆಯುವ ಅತೀ ಕನಿಷ್ಠ ಬೆಲೆಯ ಒಂದು ಟಿಕೇಟಿನ ಬೆಲೆಗೆ ಸರಿಯಲ್ಲ. ಇದೆಲ್ಲ ಮಾಡುವುದು ಯಾಕೆಂದು ಗೊತ್ತಿದೆಯಲ್ಲ. ಬಡಜನರನ್ನು ಮತ್ತಿಷ್ಟು 'ಬಡ' ಅಲ್ಲಲ್ಲ 'ಶ್ರೀಮಂತ'ರನ್ನಾಗಿಸಲು ಅಂಗವಿಕಲರ ಜೀವನಕ್ಕೆ ದಾರಿದೀಪ ತೋರಿಸಲು ಸರ್ಕಾರ ಸಾರ್ವಜನಿಕ ಸಂಸ್ಥೆಗಳು ಸಾಲದೆ!? ಎಲ್ಲವೂ ಘೋಷಣೆಗಳು, ಕೇಳಲು ಬಹಳ ಆಪ್ಯಾಯಮಾನವಾದುವುದಳು!!

ಎಷ್ಟೇ ವಿರೋಧವಿದ್ದರೂ ಭುವನಸುಂದರಿ ಸ್ಪರ್ಧೆಯ ದಿನವು ಬಂದೇ ಬಿಟ್ಟಿತು. ಎಲ್ಲ ದೇಶಗಳ ಸೌಂದರ್ಯ ರಾಣಿಯರೂ ಹಣೆ ತುಂಬ ಕುಂಕುಮವಿಟ್ಟು ಜರತಾರಿ ಸೀರೆಯುಟ್ಟು ಸೆರಗು ಹೊದ್ದುಕೊಂಡು ಬಂದುದು ನೋಡುವಂತಿತ್ತು. ಕೆಲವರು ನೀಳಕಂಬಗಳಂತೆ, ಕೆಲವರು ಡ್ರಿಮೀಡ್ರಮ್ಮುಗಳಂತೆ, ಎಲ್ಲಿಯೋ ಅಂಚು, ಎಲ್ಲಿಯೋ ಸೆರಗು ಎಂಬಂತೆ ಹೇಗೇಗೋ ಸೀರೆ ಉಟ್ಟು ತಡವರಿಸುತ್ತಿದ್ದರು. ಒಮ್ಮೆಲೆ ಮೈಕಾಸುರನ ಸುತ್ತಿದ ವೈಯರು ಸಡಿಲಾಯಿತು. ಒಬ್ಬ ಸುಂದರಿ ಉರುಳಿದಳು. ಒಬ್ಬಳ ನಂತರ ಒಬ್ಬಳು ಎಲ್ಲರೂ ಧಡ ಧಡ ಸ್ಟೇಜಿನ ಮೇಲಿಂದ ಮೆಟ್ಟಿಲುಗಳ ಮೇಲಿಂದ ಗುಡುಗುಡು ಉರುಳಿ ಕರುನಾಡಮಾತೆಯ ಪಾವನ ಪಾದಧೂಳಿಯನ್ನು ಪಡೆದು ಧನ್ಯರಾದರು. ಎಲ್ಲೆಡೆ ನಗು, ಕೇಕೆ, ಸಿಳ್ಳು, ಚಪ್ಪಾಳೆ ಸದ್ದು ಕಿವಿಗಡಚಿಕ್ಕುವಷ್ಟು! ಇದೂ ಸ್ಪರ್ಧೆಯ ಒಂದು ಭಾಗವೆಂದು

ಗಣಿಸಬೇಕು ಎಂಬ ಮುಖ್ಯ ತೀರ್ಪುಗಾರಿಯ ಸೂಚನೆ ಕೇಳಿ ಎಲ್ಲೆಡೆ ನಿಶ್ಯಬ್ದ ವ್ಯಾಪಿಸಿತು. ಎಲ್ಲರೂ ತಮ್ಮ ತಮ್ಮ ಸೀರೆಯ ನಿರಿಗೆ ಸರಿಪಡಿಸಿಕೊಳ್ಳುತ್ತಿರುವಾಗ 'ಹುರ್ರೇ' ಮುಖ್ಯ ತೀರ್ಪುಗಾರಿಣಿ ಉದ್ಗರಿಸಿದಳು. ಮರುಕ್ಷಣವೇ ನನ್ನೆದುರು ಪ್ರತ್ಯಕ್ಷಳಾದಳು ನಾನೋ ಹೆದರಿದ ಹುಲ್ಲೆಯಾದೆ. ಉಟ್ಟ ಕೆನೆಬಣ್ಣದ ಕಾಂಚೀವರಂ ರೇಶಿಮೆಯ ಸೀರೆಯ ಸೆರಗನ್ನು ಮತ್ತಷ್ಟು ಬಿಗಿಯಾಗಿ ಹೊದ್ದುಕೊಂಡೆ. ಅಂತೂ ನಮ್ಮ ದೇಶದ ಸಂಸ್ಕೃತಿಯ ಪ್ರತೀಕವೆನ್ನಿಸುವಂತವರತ್ತ ತೀರ್ಪುಗಾರಿಣಿ ಬಂದುದಕ್ಕೆ ಒಂದು ಕ್ಷಣ ಅಪಾರ ಹೆಮ್ಮೆಯೂ ಮೈದುಂಬಿತು! ಅವಳು ಬಂದುದು ನನ್ನ ಪಕ್ಕದಲ್ಲಿ ಸುಖಾಸೀನಳಾದ ತಿಮ್ಮಿಯ ಹತ್ತಿರ, ತಿಮ್ಮಿ ನಮ್ಮ ಮನೆಯ ಕೆಲಸದವಳು, ನೀಳನಾಸಿಕ, ಬಟ್ಟಲುಗಂಗಳು, ಶ್ಯಾಮಲವರ್ಣ, ನೀಳಕೇಶಿ ನೀಳಾಕಾಯದ ಕೃಷ್ಣಸುಂದರಿ, ಕೈಮಗ್ಗದ ಇಳಕಲ್ ರೇಶಿಮೆಯ ಹಸಿರುವರ್ಣದ ಸೀರೆಯ ಒಡಲ ತುಂಬಾ ಜರತಾರಿ ಬುಟ್ಟಾ, ಕೆಂಪುಬಣ್ಣದ ತೋಪತೆನಿ ಸೆರಗು ಮೈತುಂಬಾ ಹೊದ್ದು ಯಾವುದೇ ಇರುಸುಮುರುಸಿಲ್ಲದೆ ಮೆದ್ದ ಮೈಸೂರು ವೀಳೆಯದೆಲೆಯಡಿಕೆ ಆಕೆಯ ತುಟಿಗೆಂಪು ಸಹಜವಾಗಿಯೇ ಹೆಚ್ಚಿಸಿತ್ತು ಧರೆಗಿಳಿದ ಲಕ್ಷ್ಮಿಯೋ ಭೂದೇವಿಯೋ ಅನ್ನುವಂತಿದ್ದಳು, ಆರಾಮವಾಗಿ ಕಾಲಮೇಲೆ ಕಾಲುಹಾಕಿಕೊಂಡು ಕುಳಿತಿದ್ದಳು, ತಿಮ್ಮಿ. ನಗೆಮೊಗದ ತಿಮ್ಮಿ ನಿತ್ಯತೃಪ್ತಳು, 'ಹಾಯ್, ಹೌ ಚಾರ್ಮಿಂಗ್' ಎಂದು ಹೇಳುತ್ತ, ಮುಖ್ಯ ತೀರ್ಪುಗಾರಿಣಿ ತಿಮ್ಮಿಯ ಹತ್ತಿರ ಬಂದವಳೇ ತಿಮ್ಮಿಯನ್ನೆಬ್ಬಿಸಿದಳು. ಸ್ಟೇಜಿನ ಮೇಲೆ ಕರೆದೊಯ್ಯುವಷ್ಟರಲ್ಲಿ ತಿಮ್ಮಿಯ ಹೆಸರು 'ಟ್ರಿಮ್ಮಿ' ಎಂದು ಅನೌನ್ಸ್ ಆಗಿತ್ತು ಅಷ್ಟರಲ್ಲಿ ಅಲ್ಲಿಯೇ ಒಬ್ಬಳು ತಿಮ್ಮಿಗೆ ಸೆಕ್ರೆಟೆರಿಯೂ ಸಿಕ್ಕಿದ್ದಳು, ತಿಮ್ಮಿಯ ಜೀವನದುದ್ದೇಶವೇ? ಭುವನಸುಂದರಿ ಕಿರೀಟ ಧರಿಸಿದಾಗ ಹೇಗೆನ್ನಿಸಿತು? ಪ್ರೆಸ್ಸಿನವರು ಪ್ರಶ್ನಿಸಿದರು. ತಿಮ್ಮಿ ತಕ್ಷಣ ಹೇಳಿದಳು. 'ಬಡಜನ'ರ ಉದ್ಧಾರವೇ ನನ್ನ ಗುರಿ. ಎಲ್ಲ ಬಡಜನರಿಗೂ ಹೊಟ್ಟೆಗೆ, ಬಟ್ಟೆಗೆ, ಎಂದಿಗೂ ಕೊರತೆಯಾಗದಂತೆ ನೋಡಿಕೊಳ್ಳುವುದು ಎಲ್ಲ ಬಡಜನರಿಗೂ ವಾಸಕ್ಕೆ ಮನೆಯೊದಗಿಸುವುದು. ನನ್ನ ಜೀವನದ ಪರಮ ಉದ್ದೇಶ ಬಡವರ ಏಳ್ಗೆಗಾಗಿ ದುಡಿಯುವುದು. ಭುವನಸುಂದರಿ ಕಿರೀಟ ಸಿಕ್ಕಿದ್ದು ನನಗಷ್ಟೇ ಅಲ್ಲ ಬಡಜನಕ್ಕೆ ಸಿಕ್ಕ ಕಿರೀಟವಿದು. ಎಂದಳು ತಿಮ್ಮಿ, ತಿಮ್ಮಿ ಬಡಜನರಿಗಾಗಿ ಸ್ಪಂದಿಸಿದ್ದು, ಅದೂ ನಿಜವಾದ ಕಳಕಳಿಯಿಂದ ಸ್ಪಂದಿಸಿದ್ದು ಮರುದಿನದ ಎಲ್ಲ ಮುಖ್ಯ ಪತ್ರಿಕೆಗಳಿಗೆ ಮೊದಲಪುಟದ ಪ್ರಮುಖ ಸುದ್ದಿಯಾಯಿತು.

''ಭುವನ ಸುಂದರಿ ಕಥಾನಕಲು'' ನನ್ನ ನಾಲಿಗೆ ನುಡಿವಷ್ಟರಲ್ಲಿ ನೂರು ವಾರ ಓಡುವುದು ಗ್ಯಾರಂಟಿ ಈ ಸಿನೇಮಾ-'ನಗರ'ದ ಗಾಂಧೀನಗರ ಬಡಾವಣೆಯ ಬಿಸಿ ಮತ್ತು ತುರ್ತು ವಕ್ತಾರರೊಬ್ಬರು ನುಡಿದುದ್ದುದನ್ನು ಕೇಳಿ ತಡವರಿಸಿ ಗಡಬಡಿಸಿ ಎದ್ದೆ. ಅಭೂತಪೂರ್ವ 'ನಾಳೆ'ಯ ಸ್ವಾಗತಕ್ಕಾಗಿ!.... ಕಥಾನಕಕ್ಕೆ ಎಂದಾದರೂ ಸಮಾಪ್ತಿಯಿದೆಯೇ ಸೌಂದರ್ಯೋಪಾಸನೆಗೆ ವಿರಾಮವುಂಟೆ?!

Registered No. B G W 180



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.